


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 Issue : 78 Friday 29-11-2024 E-mail : maruti.b.hosamani76@gmail.com Page: 4 Price : Rs. 1/-


## ಸಿಹಿ ಕಹಿ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್ ವರದಿಗೆ ಎಚ್ಚೆತ್ತುಕೊಂಡ ತಾಲೂಕ ಆಡಳಿತ: ವರದಿಗೆ ಫಲಶೃತಿ



**ಸಿಹಿ ಕಹಿ ಸುದ್ದಿ,**
**ರೋಣ :** ಸರ್ಕಾರಿ ವಸತಿ ಗೃಹದ ಮುಂದೆ ತೆರದು ಬಿಟ್ಟಿರುವ ಕೊಳವೆ ಬಾವಿ ಕಣ್ಣು ಮುಚ್ಚಿಕೊಂಡು ಕುಳಿತ ಅಧಿಕಾರಿಗಳು. ಸಿಹಿ ಕಹಿ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ಸುದ್ದಿಗೆ ಎಚ್ಚೆತ್ತುಕೊಂಡ ತಾಲೂಕ ಆಡಳಿತ ಕೊಳವೆ ಬಾವಿ ಮುಚ್ಚಿರುವುದು ಮುಂದೆ ನಡೆಯುವ ಅಹಿತಕರ ಘಟನೆ ತಡೆಯಲು ಮುಂದಾಗಿರುವ ತಾಲೂಕ ದಂಡಾಧಿಕಾರಿ ನಾಗರಾಜ ಕೆ ಅವರು ವರದಿ ಪ್ರಕಟನೆ ಆಗಿರುವ ದಿನವೆ ಮುಚ್ಚಿ ಹಾಕಿಸಲು ಶ್ರಮ ವಹಿಸಿದ್ದಾರೆ ತಾಲೂಕ ಮಟ್ಟದ ಅಧಿಕಾರಿಗಳಿಗೆ ಹಳೆಯ ಕೊಳವೆ ಬಾವಿ ಕಂಡರೆ ಮುಚ್ಚಿ ಹಾಕಲು ಸೂಚನೆ ನೀಡಿದ್ದಾರೆ. ವರದಿಗೆ ಎಚ್ಚೆತ್ತುಕೊಂಡ ತಾಲೂಕ ಆಡಳಿತದ ತಾಲೂಕ ದಂಡಾಧಿಕಾರಿ ನಾಗರಾಜ ಕೆ ಅವರು ಪರೀವಿಕ್ಷಣಾ ಮಂದಿರದದ ಹತ್ತಿರ ಇನ್ನೊಂದು ಕೊರೆದ ಕೊಳವೆ ಬಾವಿ ಬಾಕಿ ಇರುತ್ತದೆ ಎಂದು ಸಾರ್ವಜನಿಕರು ಅದನ್ನು ಮುಚ್ಚಲು ಒತ್ತಾಯಿಸಿದ್ದಾರೆ ಎಂದು ಆಗ್ರಹಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ ರೋಣ**

## ತಾಲೂಕಿನ ಕರಡಿಗುಡ್ಡ ಸಿ.ಸಿ ರಸ್ತೆ ಕೆ.ಕೆ.ಆರ್.ಡಿ.ಬಿ ಯೋಜನೆಯ ಕಳಪೆ ಕಾಮಗಾರಿಗೆ ರೈತ ಮುಖಂಡ ಹೊಳೆಪ್ಪರಿಂದ ಗಂಭೀರ ಆರೋಪ

**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಕಲ್ಯಾಣ ಕರ್ನಾಟಕ ಅಭಿವೃದ್ಧಿಯಾಗ ಬೇಕು ಎಂದು ಸರಕಾರ ಕೋಟಿ ಗಟ್ಟಲೆ ಅನುದಾನ ನೀಡುತ್ತೆ. ಆದರೆ ಮಾನ್ವಿ ತಾಲೂಕಿನ ಕರಡಿಗುಡ್ಡ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸಿ.ಸಿ ರಸ್ತೆ ಕಾಮಗಾರಿ ಕಳಪೆ ಮಾಡಿ ಲೋಕೋಪಯೋಗಿ ಇಲಾಖೆ ಅಭಿಯಂತರರು ಹಾಗೂ ಗುತ್ತಿಗೆದಾರ ಮೋಹನ ಸೇರಿ–ಕೊಂಡು 50 ಲಕ್ಷ ಲೂಟಿ ಮಾಡುವ ಆರೋಪ ಕೇಳಿ ಬಂದಿದೆ.



2023–24 ನೇ. ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯ 50 ಲಕ್ಷ ಅನುದಾನವನ್ನು ಕರಡಿಗುಡ್ಡ ಗ್ರಾಮದ ರಸ್ತೆ ಹದಗೆಟ್ಟ ಹಿನ್ನಲೆಯಲ್ಲಿ ಶಾಸಕ ಹಂಪಯ್ಯ ನಾಯಕರು ಅನುದಾನ ನೀಡಿದ್ದರು. ಆದರೆ ಮಾನ್ವಿ ಲೋಕೋಪಯೋಗಿ ಅಭಿಯಂತರ ಮಕ್ಸೂದ್, ಎ.ಇ.ಇ ಸಾಮುವೇಲಪ್ಪ ಗುತ್ತಿಗೆದಾರ ಮೋಹನ ಸೇರಿಕೊಂಡು ಕಳಪೆ ಕಾಮಗಾರಿ ಮಾಡುತ್ತಿದ್ದಾರೆಂದು ರೈತ ಸಂಘದ ಮುಖಂಡ ಹೊಳೆಯಪ್ಪ ಉಟಕನೂರು ಆರೋಪಿಸಿದ್ದಾರೆ.

ಮಾನ್ವಿ ಲೋಕೋಪಯೋಗಿ ಅಭಿಯಂತರರು ಹಾಗೂ ಗುತ್ತಿಗೆದಾರ ಮೋಹನ ಅವರು ಮಾಡಿದ ಸಿ.ಸಿ ರಸ್ತೆ ಕಾಮಗಾರಿಯನ್ನು ಉನ್ನತ ಮಟ್ಟದ ಅಧಿಕಾರಿಗಳು ಸಮಗ್ರವಾಗಿ ತನಿಖೆ ಮಾಡಿ ಗುತ್ತಿಗೆದಾರ ಮೋಹನ ವಿರುದ್ಧ ಕಾನೂನು ಕ್ರಮ ಜರುಗಿಸ ಬೇಕು ಎಂದು ರೈತ ಸಂಘದ ಮುಖಂಡರು ಆಗ್ರಹಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಎ.ಪಿ.ಎಂ.ಸಿ ನಾಮ ನಿರ್ದೇಶನ ಸದಸ್ಯರ ಆಯ್ಕೆಯಲ್ಲಿ ಹಿರಿಯ ಕಾಂಗ್ರೆಸ್ ಮುಖಂಡರ ಅಸಮಾಧಾನ

**ಸಿಹಿ ಕಹಿ ಸುದ್ದಿ,**
**ಕೊಟ್ಟೂರು :** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕರ್ನಾಟಕ ಸರ್ಕಾರ ನಾಮ ನಿರ್ದೇಶಕರ ಆಯ್ಕೆಯಲ್ಲಿ ತೂಲಹಳ್ಳಿ ತಾಲೂಕು ಪಂಚಾಯಿತಿ ಕ್ಷೇತ್ರದಿಂದ ಒಂದೇ ಕುಟುಂಬಕ್ಕೆ ಎರಡು ಸದಸ್ಯತ್ವ ನೀಡಿದ್ದು. ಈ ಭಾಗದ ಕಾಂಗ್ರೆಸ್ ಹಿರಿಯ ಮುಖಂಡರಾದ ಇಮಾಮ್ ಸಾಹೇಬ್, ಹೆಚ್ ಜಿ ರಾಮನಗೌಡ ಹನುಮನಹಳ್ಳಿ, ಹರಕನಾಳ ಹಾಲೇಶಪ್ಪ ಹನುಮನಹಳ್ಳಿ, ಉಮೇಶ್ ತೂಲಹಳ್ಳಿ, ಚಿದಾನಂದಪ್ಪ ನಿವೃತ್ತಿ ಶಿಕ್ಷಕರು ಜೋಳದ ಕೂಡ್ಲಿಗಿ ಇನ್ನೂ ಅನೇಕ ಕಾಂಗ್ರೆಸ್ ಮುಖಂಡರು ತುಂಬಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಾಸಕರದ



ಡಾ, ಎನ್.ಟಿ ಶ್ರೀನಿವಾಸ್ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರ ಅಲ್ಪಾವಧಿಯಲ್ಲಿ ಜನರ ಅತಿ ಹೆಚ್ಚು ಪ್ರೀತಿ ಗಳಿಸುವಲ್ಲಿ ಯಶಸ್ಸು ಕಂಡರೂ ಈ ಭಾಗದ ಅಭಿವೃದ್ಧಿ ಮತ್ತು ಕೆಲ ಕಾಂಗ್ರೆಸ್ ಮುಖಂಡರಿಗೆ ಅನ್ಯಾಯವಾಗಿದೆ ಒಂದೇ ಕುಟುಂಬಕ್ಕೆ ಎಪಿಎಂಸಿಯ ಎರಡು ಸದಸ್ಯತ್ವ ನೀಡುವ ಮೊದಲು ವಿಚಾರಣೆ ಮಾಡ ಬೇಕಾಗಿದೆಯಂತೆ ಇನ್ನ ಮುಂದಿನ ದಿನಗಳಲ್ಲಾದರೂ ತಾಲೂಕು ಪಂಚಾಯತಿಯ ತೂಲಹಳ್ಳಿ ಕ್ಷೇತ್ರಕ್ಕೆ ಹೆಚ್ಚಿನ ಗಮನ ವಹಿಸಬೇಕು. ಹನುಮನಹಳ್ಳಿಯು ಕೂಡ್ಲಿಗಿ ಕ್ಷೇತ್ರದ ಕೊನೇ ಭಾಗವಾದರೂ ಅತಿ ಹೆಚ್ಚು ಮತಗಳನ್ನು ನೀಡುವುದರ ಮೂಲಕ ಸಹಕಾರಿಯಾಗಿದೆ ಎಂದು ಅಸಮಾನದಿಂದ ಬೇಸರ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## "ಮನದ ಸುಮಾತು ಪಾಲಿಸಿ ಸುಖಮಯ ಜೀವನ ಸಾಗಿಸಿ"

ಜ್ಞಾನ ಜ್ಯೋತಿ ಸರ್ವರ ಮನ ಬೆಳಗಲು
ವಿಶ್ವದಿ ಬಾಳುವ ಮನ ಪಾವನ
ಅರಿತವನೇ ತಪ್ಪಿಸಿಗಿದರೆ ಶಿಕ್ಷೆಗೆ ಅರ್ಹನು
ಶಿಕ್ಷಣವಿಲ್ಲದವನು ಪಶುವಿನಂತೆ ಹಲಬುವನು
ಅನುಭವದ ಬುದ್ಧವಂತ ಜಗದ
ಆದರ್ಶತನದ ರೂವಾರಿ
ಮುಖದಲಿ ನೈಜತೆಯ ನಗುವಿರಲು ಗೆಲುವಿಗೆ ಮೋಸವಿರದು
ಬೆಲ್ಲದ ಮಾತುಗಿಂತ ಮನದ ಶುದ್ಧತೆ ಭಾವ ಚೆನ್ನ
ಸಹಾಯ ಹಸ್ತ ಚಾಚಿದವನ ಜರೀಬೇಡ
ನೀರಡಿಸಿದವನಿಗೆ ನೀರು ಕೋಡಿ ಹಸಿದವನಿಗೆ ಊಟ ಬಡಿಸಿ
ಚಿಕ್ಕ ಕೆಲಸ ಚೊಕ್ಕ ಬದುಕು ಸಮಾಜದ ಕುರುಹು
ಅನುಕೂಲಕ್ಕಾದವನೇ ಮಹಾದೇವ
ಒಳ್ಳೆಯ ಕಾರ್ಯಕ್ಕೆ ಆಗ ಈಗ ಎನಬೇಡ
ಮಾಡಿದ ಪುಣ್ಯ ಅನವರತ
ಹೆಜ್ಜೆ ಹೆಜ್ಜೆಗೆ ಸುರಕ್ಷತೆಗೆ ಇರಲಿ ಆದ್ಯತೆ
ಬದುಕಿನ ಪ್ರತಿ ಕ್ಷಣ ಮಹತ್ವ ನೀಡಿ
ಮನದ ಸುಮಾತು ಪಾಲಿಸಿ
ಸುಖಮಯ ಜೀವನ ಸಾಗಿಸಿ



ಶ್ರೀದೇಶಂಸು
ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
ಬಾಗಲಕೋಟ.

## ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿಕೊಳ್ಳಿ



**ರಬಕವಿ–ಬನಹಟ್ಟಿ :** 17 ವರ್ಷದ ಮೇಲ್ಪಟ್ಟ ಮತ್ತು 01–01–2025, 01–04–2025, 01–07–2025 ಮತ್ತು 01–10– 2025 ಕ್ಕೆ 18 ವರ್ಷ ಪೂರೈಸುವ ಎಲ್ಲ ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ಕಡ್ಡಾಯವಾಗಿ ನೊಂದಾಯಿಸಿಕೊಳ್ಳಬೇಕು. ಇದೇ 23 ಮತ್ತು 24 ರಂದು ಹೆಸರುಗಳನ್ನು ನೊಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ರಬಕವಿ ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಎಸ್. ಆರ್. ಎ. ಪದವಿ ಪೂರ್ವ ಕಾಲೇಜಿನಲ್ಲಿ ಮತದಾರರ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ವರ್ಷದಲ್ಲಿ ನಾಲ್ಕು ಬಾರಿ ಜನೆವರಿ 1, ಎಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1 ರಂದು ಅರ್ಹ ಮತದಾರರು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಅರ್ಹ ಮತದಾರರು ತಮ್ಮ ವಾರ್ಡ್ ಗಳಲ್ಲಿರುವ ಬಿಎಲ್‌ಓ ಕಡೆಗಳಲ್ಲಿ ಸೂಕ್ತ ದಾಖಲೆಗಳನ್ನು ನೀಡಿ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿ ಕೊಳ್ಳಬೇಕು ಎಂದು ಗಿರೀಶ ಸ್ವಾದಿ ತಿಳಿಸಿದರು.

ಸಂಪನ್ಮೂಲ ವ್ಯಕ್ತಿ ಎಚ್. ವೈ. ಆಲಮೇಲ ವಿದ್ಯಾರ್ಥಿಗಳು ಮೊಬೈಲ್ ನಲ್ಲಿ ವಿ. ಎಚ್. ಎ. ಆ?ಯಪ್ ಡೌನ್ ಲೋಡ ಮಾಡಿಕೊಂಡು ಹೆಸರನ್ನು ನೊಂದಾಯಿಸಿ ಕೊಳ್ಳಬಹುದು. ಮತದಾರರ ಪಟ್ಟಿಯಲ್ಲಿ ಹೆಸರು ನೊದಾಯಿಸುವ ಬಗ್ಗೆ ಮತ್ತು ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ ಬಗ್ಗೆ ಮಾಹಿತಿಯನ್ನು ನೀಡಿದರು.

ಪ್ರಾಚಾರ್ಯ ಬಿ. ಆರ್. ಗೊಡ್ಡಾಳೆ, ಶಿವಕುಮಾರ ಬಿರಾದಾರ ಪಾಟೀಲ, ಮಾಧವಾನಂದ ಗುಟ್ಲಿ, ರವಿ ಹುಲ್ಲನ್ನವರ ಉಪಸ್ಥಿತರಿದ್ದರು.

## ಕೊಲೆಗಡುಕರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಿ



**ರಬಕವಿ–ಬನಹಟ್ಟಿ :** ತಮಿಳುನಾಡಿನ ಹೊಸೂರಿನ ಕಣ್ಣನ್ ವಕೀಲರ ಮೇಲೆ ನಡೆದ ಹಲ್ಲೆಯನ್ನು ರಬಕವಿ ಬನಹಟ್ಟಿ ವಕೀಲರ ಸಂಘವು ತೀವ್ರವಾಗಿ ಖಂಡಿಸುತ್ತದೆ ಮತ್ತು ವಕೀಲರ ಮೇಲೆ ಮಾರಣಾಂತಿಕ ಹಲ್ಲೆಯನ್ನು ಮಾಡಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ ತಿಳಿಸಿದರು.

ಅವರು ಶುಕ್ರವಾರ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ವಕೀಲರ ವಿರುದ್ಧ ಇಂಥ ಘಟನೆಗಳು ನಡೆಯುತ್ತಿರುವುದು ಸೂಕ್ತವಲ್ಲ. ವಕೀಲರು ಕೂಡಾ ತಮ್ಮ ಜವಾಬ್ದಾರಿಗಳನ್ನು ಅರಿತುಕೊಂಡು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ಮರುಕಳಿಸದಂತೆ ಸಂಬಂಧಪಟ್ಟ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು. ತಪ್ಪಿಸ್ಥರಿಗೆ ಕಾನೂನು ರೀತಿಯಲ್ಲಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಕುಲಕರ್ಣಿ ತಿಳಿಸಿದರು.

ಕಾರ್ಯದರ್ಶಿ ಎಸ್. ಜಿ. ಸಲಬನ್ನವರ, ಸಹ ಕಾರ್ಯದರ್ಶಿ ಪಿ. ಜಿ. ಪಾಟೀಲ, ರಮೇಶ ಎಕ್ಸಂಬಿ, ಬಸವರಾಜ ಭೂತಿ, ಮಹಾಂತೇಶ ಪದ್ಮಗೊಂಡ, ರಾಘವೇಂದ್ರ ಗೊಳಸಂಗಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಕಬ್ಬು ಸಾಗಣೆ ಟ್ರ್ಯಾಕ್ಟರ್ ಚಾಲಕರಿಗೆ ಪೊಲೀಸರಿಂದ ಲೆಫ್ಟ್ ರೈಟ್



**ರಬಕವಿ–ಬನಹಟ್ಟಿ :** ದೀಪಾವಳಿ ನಂತರ ಕಬ್ಬು ತುಂಬಿದ ಟ್ರ್ಯಾಕ್ಟರಗಳು ರಸ್ತೆಗೆ ಇಳಿಯುವುದರಿಂದ ಗ್ರಾಮೀಣ ಹಾಗು ಪಟ್ಟಣದ ರಸ್ತೆಗಳು ತೀವ್ರ ಟ್ರಾಫಿಕ್ ಜಾಮ್ ಆಗುವಲ್ಲಿ ಕಾರಣವಾಗುತ್ತಲಿದೆ. ಅದರಂತೆ ಅಪಘಾತಗಳನ್ನು ತಡೆಯುವಲ್ಲಿ ಪೊಲೀಸ್ ಇಲಾಖೆಯಿಂದ ನಾನಾ ಬಗೆಯ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಇಂದು ಹಿಪ್ಪರಗಿಯ ಸಾಯಿ ಪ್ರಿಯಾ ಸಕ್ಕರೆ ಕಾರ್ಖಾನೆಯಲ್ಲಿ ಬನಹಟ್ಟಿ ಪೊಲೀಸ್ ಠಾಣಾ ಪಿ.ಎಸ್.ಐ. ಶಾಂತಾ ಹಳ್ಳಿಯವರ ತಂಡ ತೆರಳಿ ಅಲ್ಲಿದ್ದ ನೂರಾರು ಕಬ್ಬು ತುಂಬಿದ ಟ್ರ್ಯಾಕ್ಟರ್ ಹಾಗು ಲಾರಿ ಮಾಲಿಕರಿಗೆ ಸಾಗಾಣಿಕೆ ಬಗ್ಗೆ ಸುಲಭವಾಗಿ ಸಂಚಾರದ ನಿಯಮಗಳನ್ನು ತಿಳಿಸಿ ಹೇಳುವಲ್ಲಿ ಕಾರಣವಾಯಿತು.

ತಮ್ಮ ವಾಹನಗಳಿಗೆ ಚಾಲನಾ ಪರವಾನಿಗೆ, ನೊಂದಣಿ ದಾಖಲು ಸೇರಿದಂತೆ ಇತರೆ ದಾಖಲಾತಿಗಳನ್ನು ಇಟ್ಟುಕೊಂಡು ಸುರಕ್ಷಿತವಾಗಿ ಸಂಚಾರ ನಿಯಮಗಳನ್ನು ಪಾಲಿಸಿ ವಾಹನ ಚಲಾಯಿಸಬೇಕೆಂದು ತಿಳಿಸಿದರು.

ಇದೇ ಸಂದರ್ಭ ಪ್ರತಿಫಲಿತ ಚಿಹ್ನೆ, ಶಬ್ದ , ಒಂದೇ ಬದಿ ಹಾಗು ನಿಧಾನ ಸಂಚಾರ ಸೇರಿದಂತೆ ಎಲ್ಲ ರೀತಿಯ ಸಂಚಾರದ ಎಚ್ಚರಿಕೆಗಳನ್ನು ನೀಡುವ ಮೂಲಕ ಅವಶ್ಯವಿರುವ ಟ್ರ್ಯಾಕ್ಟರ್ ಹಾಗು ಲಾರಿಗಳ ಹಿಂದೆ ಪ್ರತಿಫಲಿತ ಚಿಹ್ನೆಗಳನ್ನು ಅಳವಡಿಸುವ ಮೂಲಕ ರಾತ್ರಿ ಉಂಟಾಗುವ ಅಪಘಾತಗಳ ಕಡಿವಾಣಕ್ಕೆ ದಾರಿಯಾಗಲಿದೆ ಎಂದರು.

## ಸಂವಿಧಾನ ದಿನ: ಜಿಲ್ಲಾಡಳಿತದಿಂದ ಅರ್ಥಪೂರ್ಣ ಸಂವಿಧಾನ ದಿನ ಆಚರಣೆಗೆ ನಿರ್ಧಾರ

**ವಿಜಯಪುರ :** ಜಿಲ್ಲಾಡಳಿತದ ವತಿಯಿಂದ ನವೆಂಬರ್ 26 ರಂದು ಅರ್ಥಪೂರ್ಣವಾಗಿ ಸಂವಿಧಾನ ದಿನವನ್ನು ಆಚರಿಸಲು ನಿರ್ಧರಿಸಲಾಯಿತು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಪೂರ್ವಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ನವೆಂಬರ್ 26ರಂದು ಸಂವಿಧಾನ ದಿನದ ಅಂಗವಾಗಿ ಅಂದು ಬೆಳಿಗ್ಗೆ 9.30ಕ್ಕೆ ನಗರದ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಸಂವಿಧಾನ ಜಾಗೃತಿ ಜಾಥಾ ಮೆರವಣಿಗೆ, ಸಂವಿಧಾನ ಪೀಠಿಕೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆಯನ್ನು ಡೊಳ್ಳು ಕುಣಿತ, ಕರಡಿ ಮಜಲು, ಗೊಂಬೆ ಕುಣಿತ ಸೇರಿದಂತೆ ವಿವಿಧ ಕಲಾ ಮೇಳಗಳೊಂದಿಗೆ ಅದ್ದೂ–ರಿಯಾಗಿ ಮೆರವಣಿಗೆ ಆಯೋಜಿಸಲು ನಿರ್ಧರಿಸಲಾಯಿತು.



ಅಂದು ಬೆಳಿಗ್ಗೆ 10–30ಕ್ಕೆ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಂಡು, ಕಾರ್ಯಕ್ರಮದಲ್ಲಿ 1. ಭಾರತ ಸಂವಿಧಾನದ ಹೆಜ್ಜೆಗಳು, 2. ಭಾರತ ಸಂವಿಧಾನದ ಪೀಠಿಕೆಗಳ ಆಶಯಗಳು, 3. ಸಂವಿಧಾನದಲ್ಲಿನ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು ಕಲ್ಯಾಣ ರಾಜ್ಯದ ಪರಿಕಲ್ಪನೆ, 4. ಸಂವಿಧಾನದ ಅಗತ್ಯತೆ, ಅಂದು ಮತ್ತು ಇಂದು ಉಪನ್ಯಾಸ ಕಾರ್ಯಕ್ರಮಗಳು, ಸಂವಿಧಾನ ಕುರಿತ ಗಾಯನ, ರಂಗನಾಥ ಬತಾಸೆ ತಂಡದಿಂದ ನೃತ್ಯ ರೂಪಕ, ಸಂವಿಧಾನ ರಚನೆ ಹಾಗೂ ಅದರ ಕುರಿತ ಛಾಯಾಚಿತ್ರ ಪ್ರದರ್ಶನ ಸೇರಿದಂತೆ ಅರ್ಥಪೂರ್ಣ ಸಂವಿಧಾನ ದಿನವನ್ನು ಆಚರಿಸಲು ನಿರ್ಧರಿಸಲಾಯಿತು.

ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ವಿವಿಧ ಇಲಾಖೆ ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ತೋಟಗಾರಿ–ಕೆ ಇಲಾಖೆಯಿಂದ ವೇದಿಕೆ ಅಲಂಕಾರ, ಮೆರವಣಿಗೆ ಹಾಗೂ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಹಾಗೂ ವಿವಿಧ ರಸ್ತೆಗಳು, ವಿವಿಧ ವೃತ್ತಗಳ ಸ್ವಚ್ಛತೆ, ದೀಪಾಲಂಕಾರ, ಸೂಕ್ತ ಆಸನಗಳ ವ್ಯವಸ್ಥೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ, ಕಡ್ಡಾಯವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು ಮೆರವಣಿಗೆ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಗೈರಾದ ಅಧಿಕಾರಿಗಳ ಹೆಸರನ್ನು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಅಂತಹ ಅಧಿಕಾರಿಗಳ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪುಂಡಲಿಕ ಮಾನವರ ಅವರು ಮಾತನಾಡಿ, ಶಾಲಾ, ಮಕ್ಕಳಿಗೆ ಸಂವಿಧಾನ ಆಶಯದ ಕುರಿತು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಅರಿವು ಮೂಡಿಸಲಾಗುತ್ತಿದೆ. ಶಾಲಾ ಕಾಲೇಜುಗಳಿಂದ ಸಂವಿಧಾನ, ಡಾ.ಬಿ.ಆರ್.ಅಂಬೇಡ್ಕರ್ ಕುರಿತ ಚಿತ್ರಕಲೆ ಪ್ರದರ್ಶನ, ಚರ್ಚಾ ಸ್ಪರ್ಧೆ, ಸಂವಿಧಾನ ಪೀಠಿಕೆ ವಾಚನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಆಜೂರ ಪ್ರತಿಷ್ಠಾನದಿಂದ ಸಾಹಿತ್ಯ ಕೃತಿಗಳ ಆಹ್ವಾನ

**ಹಾರೂಗೇರಿ :** ಸ್ಥಳೀಯ ಆಜೂರ ಪ್ರತಿಷ್ಠಾನವು ಪ್ರತಿ ವರ್ಷದಂತೆ ಈ ವರ್ಷವೂ ಆಜೂರ ಪ್ರತಿಷ್ಠಾನ ಪ್ರಶಸ್ತಿಗೆ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಆವ್ಹಾನಿಸಿದೆ.

ಕಥೆ, ಕವನ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ ಪ್ರವಾಸ ಕಥನ, ಜೀವನ ಚರಿತ್ರೆ, ಆತ್ಮಚರಿತ್ರೆ, ಮುಂತಾದ ಸಾಹಿತ್ಯ ಕೃತಿಗಳ ನಾಲ್ಕು ಪ್ರತಿಗಳನ್ನು ದಿನಾಂಕ 01–01– 2025 ರ ಒಳಗಾಗಿ ಬಿ. ಆರ್. ಆಜೂರ ಅಧ್ಯಕ್ಷರು, ಆಜೂರ ಪ್ರತಿಷ್ಠಾನ, ಶಾಂತ ವಲಯ, ಕೆ.ಇ.ಬಿ. ಹಿಂದೆ ಗೋಕಾಕ ರಸ್ತೆ, ಹಾರೂಗೇರಿ– 591 220 ತಾಲೂಕು: ರಾಯಬಾಗ ಜಿಲ್ಲಾ : ಬೆಳಗಾವಿ ಇವರಿಗೆ ಕಳುಹಿಸಿಕೊಡಬೇಕೆಂದು ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಹಂದಿಗುಂದದ ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮೀಜಿಯವರು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸಾಹಿತ್ಯ ಕೃತಿಗಳು 2024 ರ ಡಿಸೆಂಬರ್ 31 ರೊಳಗೆ ಪ್ರಕಟಗೊಂಡಿರಬೇಕು. ಪ್ರಶಸ್ತಿಯು ನಗದು ಬಹುಮಾನ ಮತ್ತು ಫಲಕ ಒಳಗೊಂಡಿರುತ್ತದೆ. ಆಯ್ಕೆಗೊಂಡ ಅತ್ಯುತ್ತಮ ಕೃತಿಗಳಿಗೆ ಹಾರೂಗೇರಿಯಲ್ಲಿ 2025 ನೇ ಸಾಲಿನ ಜನೇವರಿ ಎರಡನೇಯ ವಾರದಲ್ಲಿ ನಡೆಯಲಿರುವ ಲಿಂಗೈಕ್ಯ ಗಂಗಮ್ಮ ಹಾಗೂ ಲಿಂಗೈಕ್ಯ ರಾಮಪ್ಪ ಆಜೂರ ದಂಪತಿಗಳ 35 ನೇ ಗಂಗಾರಾಮೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ಜಿಲ್ಲೆಯ ಲೇಖಕರಿಗೆ ಮೀಸಲಾದ ಜಿಲ್ಲಾ ಮಟ್ಟದ ಅತ್ಯುತ್ತಮ ಪುಸ್ತಕ ಪ್ರಶಸ್ತಿಗೆ ಬೆಳಗಾವಿ ಜಿಲ್ಲೆಯ ಲೇಖಕರು ಮಾತ್ರ ಕೃತಿಗಳನ್ನು ಕಳುಹಿಸಬೇಕು. ಬಹುಮಾನಗಳನ್ನು ನಾಲ್ಕು ಪ್ರಶಸ್ತಿಗಳಿಗೆ ಹಂಚಲಾಗುತ್ತದೆ. ಬೆಳಗಾವಿ ಜಿಲ್ಲೆಯ ಲೇಖಕರು ರಾಜ್ಯಮಟ್ಟದ ಪ್ರಶಸ್ತಿಗಾಗಿ ಪ್ರತ್ಯೇಕ ಕೃತಿಗಳನ್ನು ಕಳುಹಿಸುವ ಅಗತ್ಯವಿಲ್ಲ.

ಕೃತಿಗಳ ಲಕೋಟೆಯ ಮೇಲೆ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಪ್ರಶಸ್ತಿಗಾಗಿ ಎಂಬುವುದನ್ನು ನಮೂದಿಸಬೇಕು. ಕೃತಿಗಳನ್ನು ಯಾವುದೇ ಕಾರಣಕ್ಕೂ ಮರಳಿಸುವುದಿಲ್ಲ. ಹೆಚ್ಚಿನ ಮಾಹಿತಿಗೆ ಬಸವರಾಜ ಆಜೂರ– 9481448808, ಹಾಗೂ ಪ್ರತಿಷ್ಠಾನದ ಮಾರ್ಗದರ್ಶಕರಾದ ಹಿರೇಮಠ ಎಸ್. ಆರ್. ಬೆಳಗಾವಿ 9845566569 ಹಾಗೂ ಡಾ: ರುದ್ರಪ್ಪಾ ನಿಷ್ಠಿ ಬಳ್ಳಾರಿ 9342726398. ಡಾ: ತಮ್ಮಣಗೌಡರ ಲಕ್ಷ್ಮೇಶ್ವರ 944074397. ಹಾಗು ಖ್ಯಾತ ಸಂಶೋಧಕರು ಡಾ: ಸಿದ್ದಣ್ಣ ಉತ್ನಾಳ ವಿಜಯಪುರ 9449625025 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

# ಸರಸ್ವತಿ ದೇವಿಯನ್ನು ಸತತ ಅಧ್ಯಯನದಿಂದ ಒಲಿಸಿಕೊಳ್ಳಲು ಸಾಧ್ಯ: ಉಮಾದೇವಿ




**ವಿಜಯಪುರ :** ಲಕ್ಷ್ಮೀ ಪ್ರಯತ್ನದಿಂದ ಪಡೆದರೆ, ಸರಸ್ವತಿ ತಪಸ್ಸಿನಿಂದ ಪಡೆಯಲು ಸಾಧ್ಯ ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ (ಡಾಯಟ) ಪ್ರಾಚಾರ್ಯೆ ಉಮಾದೇವಿ ಸೊನ್ನದ ಹೇಳಿದರು.

ಪ್ರಾ.ಎ.ಎಸ್.ಹಿಪ್ಪರಗಿಪ್ರತಿಷ್ಠಾನಮತ್ತುಬಿ.ಎಲ್.ಡಿ.ಇ. ಸಂಸ್ಥೆಯ ಸಮನ್ವಯ ಆಂಗ್ಲ ಮಾಧ್ಯಮ ಶಾಲೆ ಇವುಗಳ ಸಹಯೋಗದಲ್ಲಿ ಶ್ರೀ ಶಂಭು ತುಪ್ಪದ ಅವರ ಮಾವ ಸಂಗಪ್ಪ ಕಡಿ ಮತ್ತು ಬೋರಮ್ಮ ಕಡಿ ಅವರ ಸ್ಮರಣಾರ್ಥ ಮತ್ತು ಕೃಷ್ಣಾಜಿ ದಂಪತಿಗಳು ಕೊಡಮಾಡಿದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮನುಷ್ಯತನ್ನಬಾಲ್ಯಜೀವನದಿಂದಗುರುಗಳಮೂಲಕ ಉತ್ತಮ ಮಾರ್ಗದರ್ಶನ, ಆರೋಗ್ಯಕರ ಪರಿಸರ, ಪಾಲಕರ ಜವಾಬ್ದಾರಿ ಇದ್ದರೆ ವಿದ್ಯಾರ್ಥಿಯ ತಪಸ್ಸಿನ ಫಲದಿಂದ ಸರಸ್ವತಿ ಒಲಿಯಲು ಸಾಧ್ಯ. ಆದರೆ ಶಕ್ತಿ, ಸಾಮರ್ಥ್ಯದ ಮೂಲಕ ಇನ್ನೊಂದು ತಾಸು ಹೆಚ್ಚಿಗೆ ದುಡಿದರೆ ಲಕ್ಷ್ಮಿ ?ಮೀ ಹೆಚ್ಚುತ್ತ ಹೋಗುತ್ತಾಳೆ. ಆದರೆ ತಮ್ಮ ಏಕಾಗ್ರತೆ, ನಿರಂತರ ಪ್ರಯತ್ನ ಮತ್ತು ತಪಸ್ಸು ಶಕ್ತಿ ಇದ್ದರೆ ನೀವು ಎಸ್.ಎಸ್.ಎಲ್.ಸಿ.ಉತ್ತಮ ಫಲಿತಾಂಶ ಪಡೆಯಲು ಸಾಧ್ಯ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 2023–24ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿಜಯಪುರ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿನಿ ಪವಿತ್ರ ಕೊಣ್ಣೂರ ಹಾಗೂ ಸುಜಲ ದೇಸಾಯಿ ಅವರಿಗೆ, ಅದರಂತೆ ಎಸ್.ಎಸ್. ಕ್ಯಾಂಪಸ್‌ನಲ್ಲಿರುವ ಮೂರು ಶಾಲೆಗಳಲ್ಲಿ ಪ್ರಥಮ ಸ್ಥಾನ ಗಳಿಸಿದ ಎಸ್.ಎಸ್.ಪ್ರೌಢಶಾಲೆ 'ಬ'ದಲ್ಲಿ ಸೃಷ್ಟಿ ಅಂಬಲಿ, ವೆಂಕಟೇಶ ಪಾಟೀಲ, ಬಾಲಕಿಯರ ಪ್ರೌಢಶಾಲೆ ಲಕ್ಷ್ಮಿ ?ಮೀ ಐಹೊಳೆ ಮತ್ತು ಎಸ್.ಎಸ್.ಪ್ರೌಢಶಾಲೆ 'ಎ' ದಿಂದ ಪಲಣ ಕೋಳಿ ಅವರನ್ನು ಸನ್ಮಾನಿಸಿ ನಗದು ಬಹುಮಾನ ನೀಡಲಾಯಿತು. ಅತಿಥಿಗಳನ್ನು ಮತ್ತು ಡಾ. ಸುಭಾಸ ಕನ್ನೂರ ಪಿಎಚ್.ಡಿ. ಪಡೆದಿದ್ದಕ್ಕಾಗಿ ಪ್ರತಿಷ್ಠಾನದಿಂದ ಸನ್ಮಾನಿಸಲಾಯಿತು.

ಆಡಳಿತಾಧಿಕಾರಿ ಪ್ರೊ. ಆಯ್.ಎಸ್. ಕಾಳಪ್ಪನವರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಾಧ್ಯಾಪಕ ಎಸ್.ಸಿ. ಬಿರಾದಾರ ಪಾರಿತೋಷಕ ವಿತರಿಸಿದರು. ಡಾ. ವಿ.ಡಿ. ಐಹೊಳ್ಳಿ ಸ್ವಾಗತಿಸಿದರು.

ಎನ್.ಎಸ್. ಶಿವಣಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆರ್.ಎಸ್. ಪಟ್ಟಣಶೆಟ್ಟಿ ನಿರೂಪಿಸಿದರು. ಸಂಗಮೇಶ ಬದಾಮಿ ವಂದಿಸಿದರು. ಬಿ.ಕೆ.ಗೋಟ್ಯಾಳ, ಪರಶುರಾಮ ಪೋಳ, ಸಹದೇವ ನಾಡಗೌಡ, ವಿದ್ಯಾವತಿ ಅಂಕಲಗಿ, ಪ್ರೊ. ಎಸ್.ಬಿ. ದೊಡಮನಿ ದಂಪತಿ, ಅಶೋಕ ಹಿಪ್ಪರಗಿ ಮುಂತಾದವರು ಉಪಸ್ಥಿತರಿದ್ದರು.

# ಸುನೀಲ ನಾರಾಯಣಕರಗೆ 'ಸಾರಂಗಶ್ರೀ ಕೃಷಿ ಪ್ರಶಸ್ತಿ' ಪ್ರದಾನ

**ಸಿಂದಗಿ :** ಪಟ್ಟಣದ ಸಾರಂಗಮಠದಲ್ಲಿ ಕಾಯಕಯೋಗಿ ಲಿಂಗೈಕ್ಯ ಶ್ರೀ ಚೆನ್ನವೀರ ಮಹಾಸ್ವಾಮಿಗಳ 131ನೇ ಜಯಂತ್ಯುತ್ಸವದ ಅಂಗವಾಗಿ ಒಂದು ತಿಂಗಳ ಪರ್ಯಂತರ ಶ್ರೀಮಠದಲ್ಲಿ ಸಮಾಜೋಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಿವೆ.

ಪ್ರಥಮವಾಗಿ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನ ಪ್ರತಿವರ್ಷ ಕೊಡಮಾಡುವ ಸಾರಂಗಶ್ರೀ ಜಿಲ್ಲಾಮಟ್ಟದ ಕೃಷಿ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಉದ್ಘಾಟಿಸಿ ಜಯಂತ್ಯುತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ಆಲಮೇಲ ಪಟ್ಟಣದ ಸಾವಯವ ಕೃಷಿಕ ಸುನೀಲ ನಾರಾಯಣಕರ ಅವರಿಗೆ ಪ್ರತಿಷ್ಠಾನದ ಅಧ್ಯಕ್ಷ ಗುರುಕುಲ ಬಾಸ್ಕರ, ಈ ಬಾಗದ ಸಾಂಸ್ಕೃತಿಕ ವಲಯದ ರೂವಾರಿ ಪೂಜ್ಯ ಶ್ರೀ ಡಾ.ಪ್ರಭುಸಾರಂಗದೇವ ಶಿವಾಚಾರ್ಯ ಮಹಾಸ್ವಾಮಿಗಳು ಪ್ರಶಸ್ತಿಪ್ರದಾನ ಮಾಡಿದರು.

ಪ್ರಶಸ್ತಿ 11 ಸಾವಿರ ರೂ. ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಇದೇ ಸಂದರ್ಭದಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾದ ಮರೆಗುದ್ದಿ ಅಡವಿಸಿದ್ದೇಶ್ವರಮಠದ ನಿರುಪಾದೇಶ್ವರ ಸ್ವಾಮೀಜಿ ಅವರನ್ನು ಪ್ರತಿಷ್ಠಾನದ ವತಿಯಿಂದ ಗೌರವಿಸಲಾಯಿತು.




ಪ್ರಶಸ್ತಿ ಪುರಸ್ಕೃತ ಆಲಮೇಲ ಪಟ್ಟಣದ ಸಾವಯವ ಕೃಷಿಕ ಸುನೀಲ ನಾರಾಯಣಕರ ಮಾತನಾಡಿ, ಸಾವಯವ ಕೃಷಿಯಿಂದ ವಿಷಮುಕ್ತ ಆಹಾರ ಪಡೆಯಲು ಸಾಧ್ಯ. ಸಾವಯವ ಕೃಷಿಯಿಂದ ಬದುಕು ಸುಂದರವಾಗುತ್ತದೆ. ಸಾರಂಗಮಠದ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನ ಕೊಡಮಾಡುವ ಸಾರಂಗಶ್ರೀ ಜಿಲ್ಲಾಮಟ್ಟದ ಕೃಷಿ ಪ್ರಶಸ್ತಿ ನನಗೆ ದೊರಕಿದ್ದು ಸಂತೋಷ ತಂದಿದೆ. ಗುರುಗಳ ಆಶೀರ್ವಾದದಿಂದ ಸಮಾಜದಲ್ಲಿ ಸಾವಯವ ಕೃಷಿ ಕುರಿತು ಹೆಚ್ಚಿನ ಜಾಗೃತಿ ಮುಡಿಸುತ್ತೇನೆ ಎಂದರು.

ಪ್ರಶಸ್ತಿ ಪುರಸ್ಕೃತರ ಕುರಿತಾಗಿ ಜಮಖಂಡಿ – ಕೊಣ್ಣೂರ ಹೊರಗಿನಮಠದ ಡಾ.ವಿಶ್ವಪ್ರಭುದೇವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಈ ಬಾಗದಲ್ಲಿ ಕಾಯಕಯೋಗಿಗಳಾದ ಲಿಂಗೈಕ್ಯ ಚೆನ್ನವೀರ ಮಹಾಸ್ವಾಮಿಗಳ ಕನಸನ್ನು ಪೂಜ್ಯ ಪ್ರಭುಸಾರಂಗದೇವ ಶಿವಾಚಾರ್ಯರು ನೆರವೇರಿಸಿದ್ದಾರೆ.

ಬರಗಾಲದ ಈ ನಾಡಿನಲ್ಲಿ ಜ್ಞಾನದಾಸೋಹ ಭಕ್ತಿ ದಾಸೋಹದ ಮೂಲಕ ಜನಮನಗೆದ್ದಿದ್ದಾರೆ ಅನೇಕ ಬಡ

ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ ಎಂದರು. ಕನ್ನೊಳ್ಳಿ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅತಿಥಿಗಳಾಗಿದ್ದರು. ಶಿವಲಿಂಗಶಾಸ್ತ್ರೀ ಗೌರ ಅವರಿಂದ ಪುರಾಣ–ಪ್ರವಚನ ನಡೆಯಿತು. ಸಾರಂಗಮಠದ ಪೀಠಾಧ್ಯಕ್ಷ ಡಾ.ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

# ವಕ್ಫ್ ಉಪಾಧ್ಯಕ್ಷ ಮುದಗಲ್ಲ ಉಚ್ಚಾಟನೆ

**ಇಳಕಲ್ :** ಜಿಲ್ಲಾ ವಕ್ಫ ಸಲಹಾ ಸಮೀತಿಯಲ್ಲಿ ಉಪಾಧ್ಯಕ್ಷ ಸ್ಥಾನ ಹೊಂದಿದ್ದ ಇಳಕಲ್ ಪಟ್ಟಣದ ಮೊಹಮ್ಮದ್ ಯೂನೂಸ ಮುದಗಲ್ಲ ಇವರನ್ನುವಕ್ಫಜಮೀನುಆಕ್ರಮಕಬಳಿಕೆ ಮತ್ತು ವಕ್ಫ ಮಂಡಳಿ ಅಧ್ಯಕ್ಷ ಮತ್ತು ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲಿ ಭಾಗವಹಿಸಿ ಮಂಡಳಿಯ ವಿರುದ್ಧ ಚಟುವಟಿಕೆಯಲ್ಲಿ ಭಾಗವಹಿಸಿರುವ ಕಾರಣಕ್ಕೆ ಉಪಾಧ್ಯಕ್ಷ ಸ್ಥಾನದಿಂದ ಮತ್ತು ವಕ್ಫ ಸದಸ್ಯತ್ವದಿಂದ ಕರ್ನಾಟಕ ರಾಜ್ಯ ವಕ್ಫ ಮಂಡಳಿಯು ಉಚ್ಚಾಟನೆ ಮಾಡಿ ಆದೇಶಿಸಿದೆ.



ವಕ್ಫ ಮಂಡಳಿಯ ವಿರುದ್ಧ ಹೋರಾಟ ಮತ್ತು ಪ್ರತಿಭಟನೆಯಲ್ಲಿ ಪಾಲ್ಗೊಂಡು ಅಧ್ಯಕ್ಷರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದ ಕುರಿತು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡಿದ ಸುದ್ದಿಗಳನ್ನು ಗಂಭೀರ ಎಂದು ಪರಿಗಣಿಸಿ ಜಿಲ್ಲಾ ವಕ್ಫ ಸಲಹಾ ಸಮೀತಿಯು ದೂರನ್ನು ಕೇಂದ್ರ ಕಚೇರಿಗೆ ಸಲ್ಲಿಸಿ ವಜಾ ಗೊಳಿಸುವಂತೆ ಪತ್ರ ಬರೆದಿತ್ತು ಇದನ್ನು ಪರಿಗಣಿಸಿ 360ನೆ ರಾಜ್ಯ ಮಂಡಳಿ ಸಭೆಯಲ್ಲಿ ಜಿಲ್ಲಾ ಸಮೀತಿ ಶಿಫಾರಸ್ಸಿನಂತೆ ವಜಾ ಗೊಳಿಸುವ ನಿರ್ಣಯ ಕೈಗೊಂಡಿದೆ ಎಂದು ಕೇಂದ್ರ ಕಚೇರಿ ನಿರ್ಣಯದಂತೆ ರಾಜ್ಯ ವಾಕ್ಫ ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ಮೊಹಮ್ಮದ್ ಯುನುಷ್ ಮುದಗಲ್ಲರನ್ನು ವಜಾ ಗೊಳಿಸಿ ಕಚೇರಿ ಆದೇಶ ಹೊರಡಿಸಿದ್ದಾರೆ.

# ವಕ್ಫ್ ಹೋರಾಟದ ಕ್ರೆಡಿಟ್‌ಗಾಗಿ ಯತ್ನಾಳ– ವಿಜಯೇಂದ್ರ ಮಧ್ಯೆ ಪೈಪೋಟಿ: ಎಂ.ಬಿ. ಪಾಟೀಲ ವ್ಯಂಗ್ಯ

**ವಿಜಯಪುರ :** ವಕ್ಫ್ ಹೋರಾಟದ ಕ್ರೆಡಿಟ್ ಗಾಗಿ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಧ್ಯೆ ಪೈಪೋಟಿ ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ವ್ಯಂಗ್ಯವಾಡಿದ್ದಾರೆ.

ಬಿಜೆಪಿ ವಕ್ಫ ಕಾಯ್ದೆ ವಿರೋಧಿಸಿ ಶುಕ್ರವಾರ ಪ್ರತಿಕ್ರಿಯೆ ನೀಡಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಬಿಜೆಪಿಯವರು 1974 ರಿಂದ ಇಲ್ಲಿಯವರೆಗೆ ಏಕೆ ಹೋರಾಟ ಮಾಡಿಲ್ಲ.

ಬಿಜೆಪಿ ಅಧಿಕಾರಾವಾಧಿಯಲ್ಲೂ ವಕ್ಫ್ ಪರ ನೋಟೀಸ್ ನೀಡಲಾಗಿದೆ. ಪಹಣಿಯಲ್ಲಿ ವಕ್ಫ್ ಎಂದು ನಮೂದು ಮಾಡಲಾಗಿದೆ.

ಅವರ ಕಾಲದಲ್ಲಿ ಗೆಜೆಟ್ ಬಗ್ಗೆ ಹೋರಾಟ ಮಾಡಿಲ್ಲ. ಬಿಜೆಪಿ 2014 ರ ಚುನಾವಣಾ ಪ್ರಣಾಳಿಕೆಯಲ್ಲಿ ವಕ್ಫ್ ಪರ ಭರವಸೆ ನೀಡಿತ್ತು. ಅಷ್ಟೇ ಅಲ್ಲ. ಸಚಿವೆ ಶೋಭಾ ಕರಂದ್ಲಾಜೆ ಸಂಸತ್‌ನಲ್ಲಿ ವಕ್ಫ್ ಪರವಾಗಿ ಪ್ರಶ್ನೆ ಕೇಳಿದ್ದರು. ಈಗ ಬಿಜೆಪಿಯವರು ಹೋರಾಟ ಮಾಡುತ್ತಿದ್ದಾರೆ ಎಂದು ಕುಟುಕಿದರು.

ನಾಳೆ ಮೂರು ವಿಧಾನಸಭೆ ಉಪ ಚುನಾವಣೆ ಫಲಿತಾಂಶ ಪ್ರಕಟವಾಲಿದೆ. ಮಹಾರಾಷ್ಟ್ರ ಹಾಗೂ ಜಾಖರ್‌ಂಡ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಉದ್ಯಮಿ ಗೌತಮ್ ಅದಾನಿ ಮೇಲೆ ಅಮೆರಿಕ ಕೋರ್ಟ್ ನಿಂದ ವಾರೆಂಟ್ ಜಾರಿ ವಿಚಾರ ಕುರಿತು, ಅವರು ಯಾರೇ ಇರಲಿ.ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಕ್ರಮ ಆಗುತ್ತದೆ.

ಅದೊಂದು ಕಾನೂನು ಪ್ರಕ್ರಿಯೆ ಎಂದುಸಚಿವ ಎಂ.ಬಿ. ಪಾಟೀಲ ಪ್ರತಿಕ್ರಿಯೆ ನೀಡಿದರು.

# ಸಹಕಾರಿ ರತ್ನ ಪ್ರಶಸ್ತಿ ಪಡೆದ ಎಂ.ಎಸ್. ಸರಶೆಟ್ಟಿ ಅವರಿಗೆ ಪುರಸಭೆ ಸದಸ್ಯರಿಂದ ಸನ್ಮಾನ



**ತಾಳಿಕೋಟೆ :** ಪಟ್ಟಣದ ದಿ.ತಾಳಿಕೋಟೆ ಸಹಕಾರಿ ಬ್ಯಾಂಕ್ ನಿ,ದ ನಿರ್ದೇಶಕ ಎಂ.ಎಸ್.ಸರಶೆಟ್ಟಿ ಅವರಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ,ದ ವತಿಯಿಂದ ಸಹಕಾರಿ ರತ್ನ ಪ್ರಶಸ್ತಿ ಪಡೆದಿದ್ದಕ್ಕೆ ಪಟ್ಟಣದ ಪುರಸಭಾ ಸದಸ್ಯರುಗಳು ಬುಧವಾರರಂದು ಸನ್ಮಾನಿಸಿ ಗೌರವಿಸಿದರು. ಈ ಸಮಯದಲ್ಲಿ ಪುರಸಭಾ ಸದಸ್ಯ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ಅವರು ಮಾತನಾಡಿ ಸಮಾಜಿಕ ಸೇವೆಯಲ್ಲಿ ನಿಸ್ವಾರ್ಥದಿಂದ ಸೇವೆ ಸಲ್ಲಿಸುತ್ತಾ ಸಾಗಿದವರಿಗೆ ಮುಂದೆ ಒಂದು ದಿನ ಪ್ರತಿಫ ಸಿಕ್ಕೆ ಸಿಗುತ್ತದೆ ಎಂಬುದಕ್ಕೆ ಎಂ.ಎಸ್.ಸರಶೆಟ್ಟಿ ಅವರಿಗೆ ಸಿಕ್ಕಿರುವ ಸಹಕಾರಿ ರತ್ನ ಪ್ರಶಸ್ತಿಯೇ ಸಾಕ್ಷೀಯಾಗಿದೆ ಎಂ.ಎಸ್.ಸರಶೆಟ್ಟಿ ಅವರು ಸಹಕಾರಿ ಕ್ಷೇತ್ರವಷ್ಟೇ ಅಲ್ಲದೇ ಹಲವಾರು ಕ್ಷೇತ್ರಗಳಲ್ಲಿ ಸಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ ಈ ಪ್ರಶಸ್ತಿ ಸಿಕ್ಕಿರುವದು ತಾಳಿಕೋಟೆ ಜನತೆಗೆ ಹೆಮ್ಮೆ ತರುವಂತಹದ್ದಾಗಿದೆ ಎಂದರು.

ಈ ಸಮಯದಲ್ಲಿ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ.ಕಟ್ಟಿಮನಿ, ಪುರಸಭಾ ಸದಸ್ಯರಾದ ಅಣ್ಣಾಜಿ ಜಗತಾಪ, ವಾಸುದೇವ ಹೆಬಸೂರ, ಪರಶುರಾಮ ತಂಗಡಗಿ, ಡಿ.ವ್ಹಿ.ಪಾಟೀಲ, ಜೈಸಿಂಗ್ ಮೂಲಿಮನಿ, ಮುದಕಪ್ಪ ಬಡಿಗೇರ, ಮುಸ್ತಫಾ ಚೌದ್ರಿ, ಮೈಹಿಬೂಬ ಲಾಹೋರಿ, ಮೊದಲಾದವರು ಇದ್ದರು.

# ರೈತ ಆತ್ಮಹತ್ಯೆ 5 ಲಕ್ಷ ರೂಗಳ ಪರಿಹಾರದ ಆದೇಶ ಪ್ರತಿ ವಿತರಣೆ ರೈತರ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ: ಶಾಸಕ ಲಕ್ಷ್ಮಣ ಸವದಿ



**ಅಥಣಿ :** ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಆತ್ಮಹತ್ಯೆಯೇ ಅಂತಿಮ ಪರಿಹಾರವಲ್ಲ. ಆದ್ದರಿಂದ ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಗೆ ಮುಂದಾಗಬಾರದು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು

ಅವರು ಪಟ್ಟಣದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಸಾಲಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ತಾಲೂಕಿನ ಮುರಗುಂಡಿ ಗ್ರಾಮದ ಶ್ರೀಮತಿ ಚೇತನಾ ಭರತೇಶ ಪಾಟೀಲ ಇವರಿಗೆ ಕೃಷಿ ಇಲಾಖೆಯಿಂದ ಆತ್ಮಹತ್ಯೆ ಪರಿಹಾರ ಯೋಜನೆಯಡಿ ಮಂಜೂರಾದ 5 ಲಕ್ಷ ರೂಗಳ ಪರಿಹಾರ ಧನದ ಆದೇಶ ಪ್ರತಿಯನ್ನು ಮೃತಳ ಪತಿ ಭರತೇಶ ಪಾಟೀಲ ಅವರಿಗೆ ವಿತರಿಸಿ ಮಾತನಾಡಿದರು.

ರೈತ ಸಮುದಾಯ ಸಂಕಷ್ಟದಲ್ಲಿದೆ. ಸಾಕಷ್ಟು ರೈತರು ಆರ್ಥಿಕ ತೊಂದರೆಯಲ್ಲಿದ್ದಾರೆ. ಹಣಕಾಸಿನ ತೊಂದರೆ, ಮಾಡಿರುವ ಸಾಲಗಳಿಗೆ ಅಂಜಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳಬಾರದು. ರೈತರ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ, ಹಾಗಾಗಿ ಯಾವೊಬ್ಬ ರೈತರು ಆತ್ಮಹತ್ಯೆ ಹಾದಿ ತುಳಿಯಬಾರದು. ಏನೇ ಸಮಸ್ಯೆ ಎದುರಾದರೂ ನನ್ನ ಗಮನಕ್ಕೆ ತನ್ನಿ, ನಿಮ್ಮೊಂದಿಗೆ ನಾನಿದ್ದೇನೆ ಎಂದು ಧೈರ್ಯ ತುಂಬಿದರು.

ಸರ್ಕಾರ ಮಟ್ಟದಲ್ಲಿ ನಿರಂತರ ಪ್ರಯತ್ನಿಸಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ಮಂಜೂರು ಮಾಡಿಸಿ ಚೆಕ್ ಕೊಡುತ್ತಿದ್ದೇನೆ. ಪರಿಹಾರ ಧನವನ್ನು ಮಕ್ಕಳ ಉತ್ತಮ ಶಿಕ್ಷಣ, ಮದುವೆಯಂತಹ ಒಳ್ಳೆಯ ಕಾರ್ಯಗಳಿಗೆ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಕೃಷಿ ಇಲಾಖೆಯ ಅಧಿಕಾರಿ ನಿಂಗನಗೌಡ ಬಿರಾದಾರ. ಭರಮಾ ಮಗಾಡಿ. ಮುರುಗೇಶ ಕನಕರೆಡ್ಡಿ. ಭೀಮು ಸಡ್ಡಿ. ಅನಿಲಕುಮಾರ ನರೋಟೆ. ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸಹಕಾರ ಕ್ಷೇತ್ರಕ್ಕೆ ತನ್ನದೇ ಆದ ಗೌರವವಿದೆ : ಶಾಸಕ ಲಕ್ಷ್ಮಣ ಸವದಿ

**ಅಥಣಿ :** ಸಹಕಾರ ಕ್ಷೇತ್ರಕ್ಕೆ ತನ್ನದೇ ಆದ ಗೌರವವಿದ್ದು ಸಹಕಾರ ಸಂಘಗಳು ಪ್ರಾಮಾಣಿಕ ಹಾಗೂ ಪಾರದರ್ಶಕ ಆಡಳಿತ ನೀಡಿದರೆ ಯಶಸ್ಸಿಗಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗಲಿದೆ. ಸಹಕಾರಿ ಸಂಘಗಳು ಉತ್ತಮ ವ್ಯವಹಾರ ನಡೆಸಿದರೆ ಸಹಕಾರ ಸಂಘದ ಹೆಸರು ಜನಮಾನಸದಲ್ಲಿ ಉಳಿಯಲು ಸಾಧ್ಯ ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಅರಿಹಂತ ಸೌಹಾರ್ದ ಸಹಕಾರಿ ಸಂಘ ಹಲ್ಲೋಳಿಯ 11 ನೇಯ ಶಾಖೆಯನ್ನು ಅಥಣಿ ಪಟ್ಟಣದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಸ್ವತಂತ್ರ ಹಾಗೂ ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಕೆಲವು ತಿದ್ದುಪಡಿ ಮಾಡಲಾಗಿದ್ದು, ಈ ಹೊಸ ಕಾಯ್ದೆಯ ಸದುಪಯೋಗ ಮಾಡಿಕೊಂಡಾಗ ಸಹಕಾರಿ ಸಂಘಗಳು ಪ್ರಗತಿ ಹೊಂದಬೇಕು ಎಂದರು.

ಡಾ.ಮನಮೋಹನ್ ಸಿಂಗ ಕೇಂದ್ರ ಹಣಕಾಸು ಸಚಿವರಿದ್ದ ಸಂದರ್ಭದಲ್ಲಿ ಅರ್ಧನಾರೇಶ್ವರ ಸಮೀತಿ ನೇತೃತ್ವದಲ್ಲಿ ಜಾರಿಯಾದ ಸೌಹಾರ್ದ ಕಾನೂನು 2001 ರಲ್ಲಿ ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಜಾರಿಗೊಂಡಿತು. ಸರಕಾರದ ಹಸ್ತಕ್ಷೇಪ ಮತ್ತು ಅಧಿಕಾರಿಗಳ ಕಿರುಕುಳ ತಪ್ಪಿಸುವ ಉದ್ದೇಶದಿಂದ ಸೌಹಾರ್ದ ಕಾನೂನು ಜಾರಿಗೊಂಡಿತು ಆದರೆ ಇತ್ತೀಚಿಗೆ ಅನೇಕ ಸೌಹಾರ್ದ ಸಹಕಾರಿಗಳು ಗ್ರಾಹಕರಿಗೆ ಪಂಗನಾಮ ಹಾಕಿದ ಪರಿಣಾಮ ಆಡಳಿತ ಮಂಡಳಿಯ ಅನೇಕ ಸದಸ್ಯರು ಜೈಲಿನ ಕಂಬಿ ಎಣಿಸುವಂತಾಗಿದೆ ಸೌಹಾರ್ದ ಸಹಕಾರಿಯನ್ನು ಎಚ್ಚರಿಕೆ ಮತ್ತು ಪ್ರಾಮಾಣಿಕತೆಯಿಂದ ಮುನ್ನಡೆಸಿಕೊಂಡು ಹೋಗಬೇಕಿದೆ ಎಂದರು.




ಸರ್ಕಾರ ಹಾಗೂ ಅಧಿಕಾರಿಗಳಿಂದ ಕಿರುಕುಳ ಇರಬಾರದು ಎಂಬ ಉದ್ದೇಶದಿಂದ 1997ರಲ್ಲಿ ಸಹಕಾರಿ, ಸೌಹಾರ್ದ ಕ್ಷೇತ್ರದಲ್ಲಿ ಕಾನೂನು ತಿದ್ದುಪಡಿ ಮಾಡಲಾಯಿತು, ಈ ಕಾಯ್ದೆಯನ್ನು ಕೇಂದ್ರ ಸರ್ಕಾರ 10 ರಾಜ್ಯಗಳಲ್ಲಿ ಅನುಷ್ಠಾನಗೊಳಿಸಿದೆ. ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ಈ ಸಹಕಾರ ಕಾಯ್ದೆಯಿಂದ ಅನುಕೂಲವಾಗಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಗಚ್ಚಿನ ಮಠದ ಶಿವಬಸವ ಸ್ವಾಮೀಜಿ ಮಾತನಾಡಿ, ಸಹಕಾರ ಸಂಘಗಳು ದೂರದೃಷ್ಟಿ. ಪ್ರಾಮಾಣಿಕತೆ ಹಾಗೂ ನಿಸ್ವಾರ್ಥವಾಗಿರಬೇಕು ಸುಮಾರು 25 ವರ್ಷಗಳಿಂದ ಪ್ರಗತಿ ಪಥದಲ್ಲಿ ಸಾಗಿರುವ ಅರಿಹಂತ ಸೌಹಾರ್ದ ಸಹಕಾರಿ ಸಂಘವನ್ನು ಗಮನಿಸಿದರೆ ಇದು ಜನತೆಗೆ ಉತ್ತಮ ಸೇವೆ ಒದಗಿಸುತ್ತಿದೆ ಎನ್ನುವುದು ತಿಳಿಯುತ್ತದೆ. ಆದ್ದರಿಂದ ಈ ಸಂಘವು ಇನ್ನಷ್ಟು ಉತ್ತರೋತ್ತರವಾಗಿ ಪ್ರಗತಿ ಹೊಂದಲಿ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಗಜಾನನ ಮಂಗಸೂಳಿ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಬಾಳಾಸಾಹೇಬ ಲೋಕಾಪುರ, ಸಹಕಾರ ಸಂಘದ ಅಧ್ಯಕ್ಷ ಭರಮಪ್ಪ ಚೌಗಲಾ, ಉಪಾಧ್ಯಕ್ಷ ಬಾಹುಬಲಿ ನಾಗನೂರಿ, ಆಡಳಿತ ಮಂಡಳಿಯ ಸದಸ್ಯರಾದ ರವೀಂದ್ರ ಚೌಗಲಾ, ಜಯಪಾಲ ಚೌಗಲಾ, ರಾಮಪ್ಪ ಗೋಟೂರಿ, ಜಿನಪ್ಪಾ ಸಪ್ತಸಾಗರ, ಅಶೋಕ ಚೌಗಲಾ, ಪ್ರಕಾಶ ಚೌಗಲಾ, ಪದ್ಮನಾಭ ಚೌಗಲಾ, ಬಾಬು ಅಕ್ಕಿವಾಟಿ, ಶೃತಿ ಪಾಟೀಲ, ಸುಮತಿ ಚೌಗಲಾ, ಮಾಯಪ್ಪಾ ಹೊಳೆಪ್ಪಗೋಳ, ಬಸವರಾಜ ಪಾಟೀಲ, ಬಾಳಪ್ಪಾ ಸಂಕೇಶ್ವರಿ, ಅಥಣಿ ಶಾಖೆಯ ಸಲಹಾ ಸಮಿತಿಯ ಸದಸ್ಯರಾದ ಬಾಹುಬಲಿ ಅಸ್ಕಿ, ಸಂತೋಷ ಕ. ಸಾವಡಕರ, ಸಂದೀಪ ತೀರ್ಥ, ಬಾಹುಬಲಿ ಕಡೋಲಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಸಹಕಾರಿ ಸಂಘದ ವ್ಯವಸ್ಥಾಪಕ ಆನಂದ ಬಿ. ಚೌಗಲಾ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜೇಂದ್ರ ಜಯಪಾಲ ಸಾಂಗಾಂವೆ ನಿರೂಪಿಸಿದರು.

# ಅನಾಮದೇಯ ಮೃತ ವ್ಯಕ್ತಿಯ ವಾರಸುದಾರರ ಪತ್ತೆಗೆ ಮನವಿ

**ಕೊಪ್ಪಳ :** ಮೃತ ಅನಾಮದೇಯ ವ್ಯಕ್ತಿಯ ವಾರಸುದಾರರ ಪತ್ತೆಗೆ ಸಹಕರಿಸುವಂತೆ ಕೊಪ್ಪಳದ ಗ್ರಾಮೀಣ ಪೊಲೀಸ ಠಾಣೆಯ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

2024ರ ಆಗಸ್ಟ್ 18ರಂದು ಬೆಳಿಗ್ಗೆ 08 ಗಂಟೆಯಿಂದ ಸಂಜೆ 5ಗಂಟೆಯ ಅವಧಿಯಲ್ಲಿ ಸುಮಾರು 45 ರಿಂದ 50 ವರ್ಷದ ಅನಾಮದೇಯ ವ್ಯಕ್ತಿಯು ಹೂವಿನಾಳ ಸೀಮಾದ ಬಸವರಾಜ ಎಂಬುವರ ಕ್ವಾರಿಯಲ್ಲಿನ 8 ರಿಂದ 10 ಅಡಿ ಆಳವಿರುವ ನೀರಿನ ತೆಗ್ಗಿನಲ್ಲಿ ಆಕಸ್ಮಿಕ ಕಾಲು ಜಾರಿ ಬಿದ್ದು ಈಜು ಬಾರದಿರುವ ಕಾರಣ ಉಸಿರುಗಟ್ಟಿ ಮೃತಪಟ್ಟಿದ್ದು, ಈ ಬಗ್ಗೆ ಕೊಪ್ಪಳದ ಗ್ರಾಮೀಣ ಪೊಲೀಸ ಠಾಣೆಯ ಯುಡಿಆರ್ ನಂ 28/2024 ಕಲಂ 194 ಬಿ. ಎನ್. ಎಸ್ ಅಡಿಯಲ್ಲಿ ಈ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯ ಸುಮಾರು 5.6 ಅಡಿ ಎತ್ತರವಿದ್ದು, ದುಂಡುಮುಖ ಸದೃಢ ಮೈಕಟ್ಟು ಗೋಧಿ ಮೈ ಬಣ್ಣ, ಮೈಮೇಲೆ ಕಪ್ಪು ಬಣ್ಣದ ಲುಂಗಿ ಧರಿಸಿದ್ದನು. ಹೆಸರು ವಿಳಾಸ ಹಾಗೂ ಸಂಬಂಧಿಕರ ಬಗ್ಗೆ ವಿಚಾರಿಸಲು ಯಾವುದೇ ಉಪಯುಕ್ತ ಮಾಹಿತಿ ಸಿಕ್ಕಿರುವುದಿಲ್ಲ. ಈ ಮೃತ ವ್ಯಕ್ತಿಯ ಬಗ್ಗೆ ಗುರುತು ಹಾಗೂ ವಾರಸುದಾರರ ವಿಳಾಸ ಪತ್ತೆಯಾದಲ್ಲಿ ಕೊಪ್ಪಳದ ಗ್ರಾಮೀಣ ಪೊಲೀಸ ಠಾಣೆಯ ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803746, ಕೊಪ್ಪಳ ಪೊಲೀಸ್ ಕಂಟ್ರೋಲ್ ರೂಂ 08539–230100 ಮತ್ತು 230222 ಹಾಗೂ ಗ್ರಾಮೀಣ ಪೊಲೀಸ ಠಾಣೆಯ ದೂ.ಸಂ 08539–221333 ಪಿ.ಎಸ್.ಐ ಹಾಗೂ ಕೊಪ್ಪಳದ ಗ್ರಾಮೀಣ ಪೊಲೀಸ ಠಾಣೆಗೆ ಮಾಹಿತಿ ನೀಡುವಂತೆ ಗ್ರಾಮೀಣ ಪೊಲೀಸ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಟಿಪ್ಪು ಸುಲ್ತಾನ ಅಂಥ ವ್ಯಕ್ತಿ ಯಾರು ಹುಟ್ಟಿಲ್ಲ ಮುಂದೆ ಹುಟ್ಟೋದಿಲ್ಲ: ಶಾಸಕ ಕಾಶಪ್ಪನವರ

**ಇಳಕಲ್ :** ಸ್ವಾತಂತ್ರ್ಯ ಹೋರಾಟಗಾರ, ವೀರ, ಶೂರ, ಟಿಪ್ಪುವಿನಂತ ವ್ಯಕ್ತಿ ಯಾರು ಇಲ್ಲ ಮುಂದೆಯೂ ಹುಟ್ಟುವುದಿಲ್ಲ ಎಂದು ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ,ಶಾಸಕ ವಿಜಯಾನಂದ ಎಸ್. ಕಾಶಪ್ಪನವರ ಹೇಳಿದರು ನಗರದ ಕಂಠಿ ವೃತ್ತದಲ್ಲಿ ಟಿಪ್ಪು ಸುಲ್ತಾನ ಕಮೀಟಿ ಟಿಪ್ಪು ಸುಲ್ತಾನ ಅವರ 274ನೇ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಸಾರ್ವಜನಿಕ ಸಭೆಯಲ್ಲಿ ಶಾಸಕ ಕಾಶಪ್ಪನವರ ಹಾಗೂ ವೇದಿಕೆ ಮೇಲಿದ್ದ ಗಣ್ಯರೆಲ್ಲ ಸಸಿಗೆ ನೀರರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಉದ್ಘಾಟನೆ ಪರ ಮಾತುಗಳಲ್ಲಿ ಬಿಜೆಪಿ ಬ್ರಿಟಿಷರ ಜನತಾ ಪಕ್ಷ ಎಂದು ಟೀಕಿಸುತ್ತ ಟಿಪ್ಪು ಸುಲ್ತಾನರ ಬಗ್ಗೆ ಇಲ್ಲ ಸಲ್ಲದ ಅವಹೇಳನಕಾರಿ ಮಾತನಾಡುತ್ತಿರುವುದು ವಿಷಾದನೀಯ ಎನ್ನುತ್ತಾ ಇಂದಿಗೂ ಶೃಂಗೇರಿಯ ಶಾರದಾಂಬೆಗೆ ಬೆಳಿಗ್ಗೆ 5 ಗಂಟೆಗೆ ಟಿಪ್ಪು ಸುಲ್ತಾನರ ಹೆಸರಿನಲ್ಲಿ ಮಂಗಳಾರತಿಯನ್ನು ಮಾಡುತ್ತಾರೆ ಎನ್ನುತ್ತ ಟಿಪ್ಪು ಸುಲ್ತಾನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ದೇಶ ಕಂಡ ವೀರ,ಶೂರ, ಹೋರಾಟಗಾರ ಮಹಾನ ವ್ಯಕ್ತಿ ಎಂದು ಹೆಮ್ಮೆಯಿಂದ ಹೇಳಿದರು.

ಪತ್ರಕರ್ತ, ಲೇಖಕ ಟಿ. ಗುರುರಾಜ್ ಮುಖ್ಯ ಭಾಷಣಕಾರರಾಗಿ ರಾಜಕಾರಣ ಧರ್ಮಗಳ ನಡುವೆ ವಿಷಬೀಜ ಬಿತ್ತುವ ಬ್ರಿಟಿಷ್ ಸಂಸ್ಕೃತಿಯಂತೆ ರಾಜಕಾರಣ ಮಾಡುತ್ತಿರುವ ಬಿಜೆಪಿಯವರನ್ನು ಪರೋಕ್ಷವಾಗಿ ಟೀಕಿಸಿ ನಾಡಿನ ಭವ್ಯ ಸಂಸ್ಕೃತಿ ಕುರಿತು ಮತ್ತು ಟಿಪ್ಪು ವದಂತಿ ಮತ್ತು ಸತ್ಯ ಸಂಗತಿಗಳನ್ನು ಕುರಿತು ಮಾತನಾಡುತ್ತಾ ಯುದ್ಧ ಮಾಡುತ್ತಲೇ ವೀರ ಮರಣ ಅಪ್ಪಿದ ಒಬ್ಬನೇ ಒಬ್ಬ ರಾಜನೆಂದರೆ ಟಿಪ್ಪು ಸುಲ್ತಾನ್ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವೆಂಕಟೇಶ್ ಸಾಕಾ ಮಾತನಾಡಿ ರಾಜಕೀಯಕ್ಕಾಗಿ ಧರ್ಮದ ಅವಹೇಳನ ಮಾಡುತ್ತಿರುವುದು ವಿಷಾದನೀಯ ಸಂಗತಿ, ಚರಿತ್ರೆ ಎಂದು ಸುಳ್ಳಾಗುವುದಿಲ್ಲ ಎಂದು ಹೇಳಿದರು. ಟಿಪ್ಪು ಸುಲ್ತಾನ ವಂಶಸ್ಥರಾದ ಸಾಹೇಬ ಜಾದಾ ಸೈಯದ್ ಮನ್ಸೂರ್ ಅಲಿ, ಅಂಜುಮನ್ ಅಧ್ಯಕ್ಷ ಉಸ್ಮಾನ ಗಣಿ ಹುಮಾನಾಬಾದ ಮಾತನಾಡಿದರು.

ಕಮಿಟಿಯ ಅಧ್ಯಕ್ಷ ಅಬ್ದುಲ್ ರಜಾಕ್ ಹಳ್ಳಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಇಬ್ರಾಹಿಂ ಪಟೇಲ್ ಕುರಾನ್ ಪಠಣ ಮಾಡಿದರು, ನಸುರುಲ್ಲಾ ಬನ್ನಿ ಅವರಿಂದ ನಾಥ್, ಮೆಹಬೂಬ ಗದಾಲ ಸ್ವಾಗತಿಸಿದರು, ರಜಾಕ್ ತಟಗಾರ ಪ್ರಾಸ್ತವಿಕವಾಗಿ ಮಾತನಾಡುತ್ತಾ ಕಾರ್ಯಕ್ರಮ ಮಾಡುವ ಉದ್ದೇಶವನ್ನು ಕುರಿತು ಮಾತನಾಡಿದರು,ನಗರಸಭೆ ಅಧ್ಯಕ್ಷ ಸುಧಾರಾಣಿ ಸಂಗಮ, ಹಾಗೂ ಸದಸ್ಯರು, ಶಾಂತಕುಮಾರ ಸುರಪುರ, ಶರಣಪ್ಪ ಆಮದಿಹಾಳ, ಬಾಬುದ್ದಿನಸಾಬ ಖಾಜಿ, ಮುಸ್ಲಿಂ ಸಮಾಜದ ಮುಖಂಡರು ಇನ್ನಿತರ ಸಮಾಜಗಳ ಪ್ರಮುಖರು ಮತ್ತು ಚಿಕ್ಕ ಬಾಲಕ ಟಿಪ್ಪುವಿನ ವೇಷದಾರಿಯಾಗಿ ಎಲ್ಲರ ಮನ ಸೆಳೆದ ಪ್ರವೀಣ ಮುದ್ಗಲ್ ನಿರೂಪಿಸಿದರು, ಶಬ್ಬಿರ ಭಾಗವಾನ ವಂದಿಸಿದರು.

# ಶತಮಾನದ ಕೆರೆ ಶಾಪಮುಕ್ತಗೊಳಿಸಲು 20 ದಿನಗಳ ಗಡುವು



**ಧಾರವಾಡ:** ಭಾರತರತ್ನಸರ್.ಎಂ.ವಿಶ್ವೇಶ್ವರಯ್ಯ ಅವರು 1911 ರಲ್ಲಿ ಕಟ್ಟಿಸಿರುವ ಧಾರವಾಡ ಕೆಲಗೇರಿಕೆರೆಶತಮಾನಕಂಡಿದೆ.ಚರಂಡಿನೀರು, ಅಂತರಗಂಗೆ, ಕಳೆ, ಕಸ ತೆಗೆದು ಸ್ವಚ್ಛಗೊಳಿಸಿ ಕೆರೆಯನ್ನು ಶಾಪಮುಕ್ತಗೊಳಿಸಲು ಮುಂದಿನ 20 ದಿನಗಳ ಗಡುವು ನೀಡುತ್ತೇನೆ. ಈ ಕುರಿತು ಆಗಿರುವ ಕರ್ತವ್ಯಲೋಪ ಗುರುತಿಸಿ, ಸೂಕ್ತ ತನಿಖೆ ಕೈಗೊಳ್ಳಲು ಲೋಕಾಯುಕ್ತದಿಂದ ಸ್ವ-ಯಂ ದೂರು ದಾಖಲಿಸಲಾಗುತ್ತಿದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ತಿಳಿಸಿದರು.

ಅವರು ಧಾರವಾಡ ನಗರದ ಕೆಲಗೇರಿ ಕೆ-ರೆಗೆ ಭೇಟಿ ನೀಡಿ, ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಉಪ ಲೋಕಾಯುಕ್ತ ನ್ಯಾಮೂರ್ತಿಗಳು ಸಾರ್ವಜನಿಕರೊಂದಿಗೆ ಸ್ವತಃ ಎರಡು ಕೀ.ಮಿ ನಡೆಯುವ ಮೂಲಕ ಕೆರೆಯ ಅವ್ಯವಸ್ಥೆ ಪರಿಶೀಲಿಸಿದರು.

ಕೆರೆ ನಿರ್ವಹಣೆ ಹಾಗೂ ಕೆರೆ ಮಾಲಿಕತ್ವ ಸೇರಿದಂತೆ ಎಲ್ಲರನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಲಾಗುತ್ತದೆ. ಕೆರೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮತ್ತು ತಾಂತ್ರಿಕ ವರದಿಯನ್ನು ಸಲ್ಲಿಸಬೇಕು. ಮಹಾನಗರಪಾಲಿಕೆಯವರು ಈಗಾಗಲೇ ರೂ. 150 ಕೋಟಿ ಮೊತ್ತದ ಪ್ರಸ್ತಾವನೆ ಸಿದ್ದಗೊಳಿಸಿರುವದಾಗಿ ತಿಳಿಸಿದ್ದಾರೆ. ಇದನ್ನು ಸಹ ಪಡೆದುಕೊಂಡು ನೇರವಾಗಿ ರಾಜ್ಯಪಾಲರನ್ನು ಭೇಟಿ ಮಾಡಿ, ಕೆರೆ ಸಮಸ್ಯೆಯನ್ನು ಮನವರಿಕೆ ಮಾಡಿಕೊಡುತ್ತೇನೆ ಎಂದು ಉಪ ಲೋಕಾಯುಕ್ತರು ತಿಳಿಸಿದರು.

ಕೆಲಗೇರಿ ಕೆರೆ ನಿರ್ವಹಣೆ ಮತ್ತು ಮಾಲಿಕತ್ವದ ವಿಚಾರದಲ್ಲಿ ಕೃಷಿ ವಿಶ್ವವಿದ್ಯಾಲಯ ಹಾಗೂ ಮಹಾನಗರಪಾಲಿಕೆಗಳು ಪರಸ್ಪರ ಬೊಟ್ಟು ತೋರಿಸಿ, ಕೆರೆ ಸ್ವಚ್ಛತೆ, ಅಭಿವೃದ್ಧಿಯನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಕೆರೆಯಲ್ಲಿ ಸಾಕ??ಟು ಅಂತರಗಂಗೆ ಬೆಳೆದಿದೆ. ಕೆರೆ ವಾಕಿಂಗ್ ಪಾಥ್‌ದಲ್ಲಿ ಗಿಡಗಂಟಿ ಬೆಳೆದಿದೆ. ಚರಂಡಿ ನೀರು ಕೆರೆ ಸೇರುತ್ತಿದೆ. ಕೆರೆಯ ಸುತ್ತಲಿನ ಜನ ಮನೆಯ ದಿನಬಳಕೆ ತ್ಯಾಜ್ಯ, ಕಸಕಡ್ಡಿ ತಂದು ಕೆರೆಯಲ್ಲಿ ಹಾಕುತ್ತಿದ್ದಾರೆ. ಇದರ ಬಗ್ಗೆ ಯಾರು ಗಮನ ಹರಿಸಿಲ್ಲ ಎಂದು ತಮ್ಮ ಅಸಮಾದಾನ ವ್ಯಕ್ತಪಡಿಸಿದರು.

ಹಿರಿಯ ನಾಗರಿಕರ ಮತ್ತು ಸಾರ್ವಜನಿಕರ ದೂರುಗಳ ಹಿನ್ನಲೆಯಲ್ಲಿ ಕೆರೆ ನಿರ್ವಹಣೆ ಮತ್ತು ಸಾರ್ವಜನಿಕರ ಆರೋಗ್ಯ, ಹಿತಾಸಕ್ತಿ ಕುರಿತು ನಿರ್ಲಕ್ಷ್ಯವಹಿಸಿ, ಅಧಿಕಾರಿಗಳು ಕರ್ತವ್ಯಲೋಪ ಎಸಗಿದ್ದಾರೆ. ಕೆಲಗೇರಿ ಕೆರೆ ನಿರ್ವಹಣೆ ಸಂಪೂರ್ಣ ನಿರ್ಲಕ್ಷ್ಯವಹಿಸಲಾಗಿದೆ.

ಈ ಕುರಿತು ತನಿಖೆ ಕೈಗೊಳ್ಳಲು ಸೋ ಮೋಟೊ ಕೇಸ್ ದಾಖಲಿಸಲಾಗುತ್ತಿದೆ ಎಂದು ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ತಿಳಿಸಿದರು.

ಕಾನೂನು, ಆರೋಗ್ಯ ಅರಿವು ಮೂಡಿಸಿ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಕೆಲಗೇರಿ ಕೆರೆ ಸುತ್ತಲಿನ ಜನರಲ್ಲಿ ಸ್ವಚ್ಛತೆ, ಆರೋಗ್ಯದ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಮಹಾನಗರಪಾಲಿಕೆಯಿಂದ ಕೆರೆಯ ಸುತ್ತತಂತಿ ಬೇಲಿ ಅಳವಡಿಸಬೇಕು. ಸಾಧ್ಯವಾದಲ್ಲಿ ಸಿಸಿಟಿವಿ ಅಳವಡಿಸಬೇಕೆಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎಂ.ಫಣೀಂದ್ರ ಅವರು ಸೂಚಿಸಿದರು.

ಪೊಲೀಸ್ ಬಿಟ್ ಹೆಚ್ಚಿಸಿ: ಕೆರೆಯ ಸುತ್ತ ಕುಡುಕರ, ಪುಂಡರ ಕಾಟ ಹೆಚ್ಚಾಗಿದೆ. ರಾತ್ರಿ ಕೆರೆಯ ದಂಡೆಯ ಫುಟ್ ಪಾಥ್ ಮೇಲೆ ಎಣ್ಣೆ ಪಾರ್ಟಿ ಮಾಡುತ್ತಾರೆ. ಕೇಳಿದರೆ ಹಲ್ಲೆಗೆ ಮುಂದಾಗಿತ್ತಾರೆ. ವೃದ್ಧರು, ಹೆಣ್ಣುಮಕ್ಕಳು, ಸಣ್ಣ ಮಕ್ಕಳು ಓಡಾಡುವದೇ ಕ??ಟವಾಗಿದೆ. ಇದಕ್ಕೆ ಸೂಕ್ತ ಪೊಲೀಸ್ ಬಂದೊಬಸ್ತ ನೀಡಬೇಕು ಎಂದು ಸಾರ್ವಜನಿಕರು ಮನವಿ ಸಲ್ಲಿಸಿದರು. ಸ್ಥಳದಲ್ಲಿದ್ದ ಪೊಲೀಸ್ ಅಧಿಕಾರಿಗಳಿಗೆ ಉಪ ಲೋಕಾಯುಕ್ತರುಪೊಲೀಸ್‌ಬಿಟ್‌ಹೆಚ್ಚಿಸುವಂತೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡುವ, ದುರ್ವತನೆ ತೋರುವ ಹಾಗೂ ಸಾರ್ವಜನಿಕ ಶಾಂತಿ ಭಂಗ ಮಾಡುವವರ ವಿರುದ್ದ ಸ್ವಯಂ ಪ್ರೇರಿತ ಕೇಸ್ ದಾಖಲಿಸಿ, ಕಠಿಣ ಕ್ರಮ ಜರುಗಿಸಿವಂತೆ ಸೂಚಿಸಿದರು.

ಮುಂದಿನ 20 ದಿನದಲ್ಲಿ ಕೆರೆ ಸ್ವಚ್ಛಗೊಳಿಸಿ, ಸುಂದರಗೊಳಿಸದಿದ್ದರೆ ಕಠಿಣ ಕ್ರಮ ಜರುಗಿಸಲಾಗುವುದು. 20 ದಿನಗಳ ನಂತರ ನಾನೇ ಕೆರೆ ನೋಡಲು ಬರುತ್ತೇನೆ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮಾತನಾಡಿ, ಇಲಾಖೆಗಳ ಸಮನ್ವಯ ಸಾಧಿಸಿ, ಕೆರೆ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮಹಾನಗರಪಾಲಿಕೆ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ ಅವರು ಮಾತನಾಡಿ, ನಾಳೆಯಿಂದ ಕೆರೆ ಸ್ವಚ್ಛತಾ ಕಾರ್ಯ ಆರಂಭಿಸುವದಾಗಿ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಗೋಪಾಲ ಬ್ಯಾಕೋಡ, ಉಪ ಪೊಲೀಸ್ ಆಯುಕ್ತ ಮಾನಿಂಗ ನಂದಗಾವಿ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಕಚೇರಿಯಲ್ಲಿನ ವಿವರಣಾ ವಿಭಾಗದ ಅಪರ ನಿಬಂಧಕರಾದ ಪಿ.ಶ್ರೀನಿವಾಸ, ನರಸಿಂಹಸಾ ಎಂ.ವಿ., ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ದೊಡ್ಡಮನಿ, ಸಿವಿಲ್ ನ್ಯಾಯಾಧೀಶ ಕಿರಣ ಪಿ.ಎಂ.ಪಾಟೀಲ್, ಧಾರವಾಡ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಹನುಮಂತರಾಯ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರ ಅನಾವರಣ ಕಾರ್ಯಕ್ರಮ



**ನವಲಗುಂದ :** ಪಟ್ಟಣದ ಬಸ್ ನಿಲ್ದಾಣದಲ್ಲಿ ವಾ.ಕ. ರಾ.ರ.ಸಾ.ಸಂಸ್ಥೆ ನವಲಗುಂದ ಘಟಕದ ಕನ್ನಡ ಕ್ರಿಯಾ ಸಮಿತಿಯಿಂದ ಹಮ್ಮಿಕೊಂಡಿದ್ದ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರ ಅನಾವರಣ ಕಾರ್ಯಕ್ರಮವನ್ನು ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಶಾಸಕ ಎನ್ ಎಚ್ ಕೋನರಡ್ಡಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು ಇಂದಿನ ಯುವ ಪೀಳಿಗೆಗೆ ಮತ್ತು ಸಮಾಜಕ್ಕೆ ಅರಿವು ಮೂಡಿಸಲು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಭಾವಚಿತ್ರ ಅಳವಡಿಸಿ ಜನರಿಗೆ ಪರಿಚಯಿಸಲು ಲೋಕಾರ್ಪಣೆ ಮಾಡುತ್ತಿರುವುದು ಸಮಾಜಕ್ಕೆ ಮಾದರಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ನಂತರ ಜ್ಞಾನಪೀಠ ಪುರಸ್ಕೃತರಾದ ಡಾ. ಕುವೆಂಪು, ಡಾ.ದ ರಾ ಬೇಂದ್ರೆ, ಡಾ. ಚಂದ್ರಶೇಖರ ಕಂಬಾರ, ಡಾ. ಗಿರೀಶ್ ಕಾರ್ನಾಡ, ಡಾ ವಿ ಕೃ ಗೋಕಾಕ, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ, ಶಿವರಾಮ ಕಾರಂತ ಹಾಗೂ ಕೆ ಎಸ್ ನಿಸಾರ್ ಅಹಮ್ಮದರವರ ಭಾವಚಿತ್ರಗಳನ್ನು ಅನಾವರಣಗೊಳಿಸಿದರು.

ಗಂಗಾಧರ ಕಮಲದಿನ್ನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅತಿಥಿಗಳಾದ ಅಶೋಕ ಮಜ್ಜಿಗುಡ್ಡ, ಪುರಸಭಾ ಅಧ್ಯಕ್ಷ ಶಿವಾನಂದ ತಡಸಿ, ಘಟಕ ವ್ಯವಸ್ಥಾಪಕ ಅಶೋಕ ಕಾಡರಕೊಪ್ಪ, ಕನ್ನಡ ಕ್ರಿಯಾ ಸಮಿತಿ ರಾಜ್ಯ ಸಂಘಟನಾ ಕಾರ್ಯದರ್ಶಿ ಮಾಬುಸಾಬ ದಿವಾನಖಾನವರ, ಎಂ ಆರ್ ಹೆಬಸೂರ, ರಾಜು ಎಂ ಮಾಲಗತ್ತಿ, ಖಾಜಾಮಿಯಾ ನಾಯ್ಕರ, ಮಂಜು ಸೂಡಿ, ಬಾಬುಶಾ ಮಕಾಂದಾರ, ರವಿ ಹುನಸಿಮರದ, ಸಲೀಮ ಮಕಾಂದಾರ ಮುನ್ನಾ ಕಲ್ಲುಕಟ್ರಿ, ರಹೀಮಾನ ಧಾರವಾಡ ಸೇರಿ ಪುರಸಭಾ ಸದಸ್ಯರು ಸಮಿತಿ ಪದಾಧಿಕಾರಿಗಳು ಘಟಕದ ಎಲ್ಲ ನೌಕರರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಮಸ್ಯೆಗಳ ಪರಿಹಾರಕ್ಕೆ ಲೋಕಾಯುಕ್ತ ಮೊದಲ ಆದ್ಯತೆ




**ಧಾರವಾಡ :** ಸಾರ್ಜನಿಕರ ಸಮಸ್ಯೆಗಳ ಪರಿಹಾರಕ್ಕೆ ಕರ್ನಾಟಕ ಲೋಕಾಯುಕ್ತ ಮೊದಲ ಆದ್ಯತೆ ನೀಡುತ್ತದೆ ಎಂದು ಕರ್ನಾಟಕ ಉಪ ಲೋಕಾಯುಕ್ತ ನ್ಯಾಮೂರ್ತಿ ಕೆ.ಎಂ.ಫಣೀಂದ್ರ ಅವರು ಹೇಳಿದರು.

ಅವರು ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಬಗ್ಗೆ ದೂರು ಸ್ವೀಕಾರ, ವಿಚಾರಣೆ ಹಾಗೂ ವಿಲೇವಾರಿ ಸಭೆ ಉದ್ಘಾಟಿಸಿ, ಮಾತನಾಡಿದರು.

ಜೀವಿಸುವ ಹಕ್ಕು ಮೂಲಭೂತ ಹಕ್ಕಾಗಿದೆ. ಅದು ಪ್ರತಿಯೊಬ್ಬರು ಗೌರವಯುತವಾಗಿ ಬದುಕುವ ಅವಕಾಶ ಮತ್ತು ಹಕ್ಕನ್ನು ಪ್ರತಿನಿಧಿಸುತ್ತದೆ. ಉತ್ತಮ ಪ್ರಕೃತಿ, ನೆಲ, ಜಲ, ಮಣ್ಣು, ಪರಿಸರ ಕಾಪಾಡುವುದು ಮತ್ತು ಪಡೆಯುವುದು ನಮ್ಮ ಹಕ್ಕು ಮತ್ತು ಕರ್ತವ್ಯವಾಗಿದೆ. ಭಾರತದ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ರಾಜ್ಯ ನೀತಿ ನಿರ್ದೇಶಕ ತತ್ತ್ವಗಳು ಪರಸ್ಪರ ಸಂಬಂಧ ಹೊಂದಿವೆ ಎಂದು ನ್ಯಾಯಮೂರ್ತಿ ಫಣೀಂದ್ರ ಅವರು ತಿಳಿಸಿದರು.

ಆಧುನಿಕ ಸರಕಾರಗಳು ಉತ್ತಮವಾದ ಜೀವನ ಮಾಡಲು ಸವಲತ್ತುಗಳನ್ನು ನೀಡುತ್ತದೆ. ಮತ್ತು ಅರ್ಹರಿಗೆ ಸರಕಾರಿ ಸವಲತ್ತುಗಳನ್ನು ಸರಿಯಾಗಿ ತಲುಪಿಸುವ ಜವಾಬ್ದಾರಿ ಕಾರ್ಯಾಂಗದಾಗಿದ್ದು, ಸರಕಾರದ ಕಲ್ಪಿತ ಕಾರ್ಯಗಳ ಅನುಷ್ಠಾನ ಕಾರ್ಯಾಂಗದಾಗಿದೆ ಎಂದು ಅವರು ತಿಳಿಸಿದರು.

ಪ್ರತಿಯೊಂದು ವ್ಯವಸ್ಥೆಯಲ್ಲಿ ಕಾನೂನಿನ ರಚನೆ ಇದೆ. ಮನುಷ್ಯಯನು ಆಸ್ತಿ, ಪಾಸ್ತಿಗಳನ್ನು ಕಾಪಾಡಿಕೊಳ್ಳುವಂತಹ ಕಾನೂನು ವ್ಯವಸ್ಥೆ ನಮ್ಮಲ್ಲಿ ಇದೆ. ಆಸ್ತಿ ಅಂತಸ್ತುಗಳ ಮೇಲೆ ವಿಲ್ ಮಾಡುವ ಮೂಲಕ ಆಸ್ತಿ ಹಕ್ಕುಗಳನ್ನು ಚಲಾಯಿಸಬಹುದು ಎಂದು ಅವರು ಹೇಳಿದರು.

ಕರ್ನಾಟಕ ಲೋಕಾಯುಕ್ತವು ನಿಯಮಾನುಸಾರ ಕರ್ತವ್ಯ ನಿರ್ವಹಿಸುವ ಸರಕಾರಿ ನೌಕರರಿಗೆ ಸಹಾಯ ಮಾಡುತ್ತದೆ. ಸುಳ್ಳು ದೂರು, ಕರ್ತವ್ಯ ನಿರ್ವಹಣೆಗೆ ಅಡಚಣೆ ಉಂಟಾದರೆ ತನಿಖೆ ಮಾಡಿ, ಸೂಕ್ತ ರಕ್ಷಣೆ ನೀಡುತ್ತದೆ. ಕರ್ತವ್ಯ ಲೋಪ ಮಾಡುವ ಅಧಿಕಾರಿ, ನೌಕರರ ವಿರುದ್ಧ ಲೋಕಾಯುಕ್ತ ಕಾಯ್ದೆ ಪ್ರಕಾರ ಕಠಿಣ ಕ್ರಮಕ್ಕೆ ಶಿಫಾರಸ್ಸು ಮಾಡುತ್ತದೆ ಎಂದು ಅವರು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ, ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮಾತನಾಡಿ, ಸರಕಾರಿ ಅಧಿಕಾರಿಗಳು ಕಾಯಕವೇ ಕೈಲಾಸ ಎಂಬುದನ್ನು ಅರಿತು ಕೆಲಸ ಮಾಡಿದರೆ ಯಾವುದೇ ದೂರುಗಳು ಬರುವುದಿಲ್ಲ. ನೈತಿಕ ಮೌಲ್ಯಗಳನ್ನು ಅರಿತು ಕೆಲಸ ಮಾಡಬೇಕು ಎಂದು ಹೇಳಿದರು.

ಮಾಡಿರೋ ತಪ್ಪುಗಳನ್ನು ಮತ್ತೆ ಮತ್ತೆ ಮಾಡಬಾರದು. ಅವುಗಳನ್ನು ಅರಿತು ಸರಿಪಡಿಸಿಕೊಳ್ಳಬೇಕು. ಸರ್ಕಾರಿ ಅಧಿಕಾರಿಗಳು ಕಾನೂನಾತ್ಮಕ ಯಾವೆಲ್ಲ ಜವಾಬ್ದಾರಿಗಳಿವೆ ಎಂಬುದನ್ನು ತಾವು ತಿಳಿಯಬೇಕು. ಇಲ್ಲಿಯವರೆಗೆ ಆಗಿರುವ ಲೋಪಗಳನ್ನು ಬಗೆಹರಿಸುವಂತಹ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ವೇದಿಕೆಯಲ್ಲಿ ಮಹಾನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಗೋಪಾಲ ಬ್ಯಾಕೋಡ, ಉಪ ಪೊಲೀಸ್ ಆಯುಕ್ತರಾದ ಸಿ.ಆರ್.ರವೀಶ, ಮಾನಿಂಗ ನಂದಗಾವಿ, ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಕಚೇರಿಯಲ್ಲಿನ ವಿವಾರಣಾ ವಿಭಾಗದ ಅಪರ ನಿಬಂಧಕರಾದ ಪಿ.ಶ್ರೀನಿವಾಸ, ನರಸಿಂಹಸಾ ಎಂ.ವಿ., ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ದೊಡ್ಡಮನಿ, ಸಿವಿಲ್ ನ್ಯಾಯಾಧೀಶ ಕಿರಣ ಪಿ.ಎಂ.ಪಾಟೀಲ್, ಧಾರವಾಡ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಹನುಮಂತರಾಯ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಯಶಸ್ವಿಗೊಳಿಸಿ: ಡಾ ಬೇಗಾರ್




**ಕೊಪ್ಪಳ :** ಚಲವಾದಿ ಸಮಾಜದ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಇದೇ ದಿ, 26,ರ ಮಂಗಳವಾರ ಬೆಳಿಗ್ಗೆ ನಗರದ ಮೇಘರಾಜ್ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದು ಸದರಿ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸಮಾಜದ ಮುಖಂಡ ಹಾಗೂ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ, ಅನಿಲ್ ಕುಮಾರ್ ಬೇಗಾರ್ ಮನವಿ ಮಾಡಿಕೊಂಡಿದ್ದಾರೆ, ಈ ಕುರಿತು ಹೇಳಿಕೆ ನೀಡಿದ ಆವರು ಸದರಿ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಚಿವರು ಸಂಸದರು ಶಾಸಕರುಗಳು ಸೇರಿದಂತೆ ಇತರ ಜನ ಪ್ರತಿನಿಧಿಗಳು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಈ ಕಾರ್ಯಕ್ರಮದಲ್ಲಿ ನಮ್ಮ ಸಮಾಜದ ಪ್ರತಿಭಾವಂತ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದು ಅವರಿಗೆ ಪ್ರತಿಭಾ ಪುರಸ್ಕಾರ ಸಮಾಜದ ಸಂಘಟನೆಗಳಿಂದ ಮಾಡಲಾಗುವುದು ಕಾರಣ ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಸೇರಿ ಸಮಾಜ ಮತ್ತು ಸಂಘಟನೆ ಬಲಪಡಿಸಬೇಕೆಂದು ಮತ್ತು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹಿಸಬೇಕೆಂದು ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಹಾಗೂ ಸಮಾಜದ ಮುಖಂಡರಾದ ಡಾ, ಅನಿಲ್ ಕುಮಾರ್ ಬೇಗಾರರವರು ಪ್ರಕಟಣೆ ಮೂಲಕ ಮನವಿ ಮಾಡಿಕೊಂಡು ಸದರಿ ಕಾರ್ಯಕ್ರಮಕ್ಕೆ ಸರ್ವರನ್ನು ಸ್ವಾಗತಿಸಿದ್ದಾರೆ.

# ಬೆಟಗೇರಿ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಶ್ರೇಷ್ಠ ಸಹಕಾರಿ ಸಂಘ ಪ್ರಶಸ್ತಿ





**ಬೆಟಗೇರಿ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವತಿಯಿಂದ ಸಹಕಾರ ಸಪ್ತಾಹದ ನಿಮಿತ್ತ ನೀಡಲಾಗುವ ಪ್ರಸಕ್ತ ವರ್ಷದ ಶ್ರೇಷ್ಠ ಸಹಕಾರಿ ಸಂಘ ಪ್ರಶಸ್ತಿಯನ್ನು ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘ ಪಡೆದುಕೊಂಡಿದೆ.

ಬೆಟಗೇರಿ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘ ಸ್ಥಳೀಯ ರೈತರ ಜೀವನಾಡಿ ಸಹಕಾರಿ ಸಂಘವಾಗಿದೆ. ಹೈನುಗಾರಿಕೆಯ ಮೂಲಕ ಇಲ್ಲಿಯ ರೈತರು ಆರ್ಥಿಕ ಸಬಲರಾಗಲು ಸಹಕಾರಿಯಾದ

ಈ ಸಂಘದ ಪ್ರಗತಿ, ರೈತರಿಗೆ ಹೈನುಗಾರಿಕೆಯ ವಿಶೇಷ ಸಹಾಯ ಸೌಲಭ್ಯ ಒದಗಿಸುತ್ತಿರುವದನ್ನು ಪರಿಗಣಿಸಿ ಬೆಳಗಾವಿಯಲ್ಲಿ ನ.20ರಂದು ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024ರ ಸಮಾರೋಪ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಯಲ್ಲಾಲಿಂಗ ದೇಯಣ್ಣವರ ಅವರಿಗೆ ಶ್ರೇಷ್ಠ ಸಹಕಾರಿ ಸಂಘ ಪ್ರಶಸ್ತಿ ನೀಡಿ ಗೌರವಿಸಿದರು.

ಈ ವೇಳೆ ಬೆಂಗಳೂರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿಯಮಿತ, ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳ ನಿಯಮಿತ ಹಾಗೂ ಸಹಕಾರ ಇಲಾಖೆಯ ಪದಾಧಿಕಾರಿಗಳು, ಅಧ್ಯಕ್ಷ, ಸದಸ್ಯರು, ಬೆಳಗಾವಿ ಜಿಲ್ಲಾ ವಿವಿಧ ಸಹಕಾರಿ ಸಂಘಗಳ ಪದಾಧಿಕಾರಿಗಳು, ಸಹಕಾರಿ ಸಂಘಗಳ ಆಡಳಿತ ಮಂಡಳಿ ಅಧ್ಯಕ್ಷರು, ಸದಸ್ಯರು, ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿ ವರ್ಗ, ಬೆಟಗೇರಿ ಹಾಲು ಉತ್ಪಾದಕರ ಸಹಕಾರಿ ಸಂಘದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿ ಧುರೀಣರು, ಗಣ್ಯರು, ಮತ್ತೀತರರು ಇದ್ದರು.

# ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಕೊಪ್ಪಳ ಜಿಲ್ಲಾ ಕ್ರೀಡಾಪಟುಗಳ ಸಾಧನೆ

**ಕೊಪ್ಪಳ :** ಉತ್ತರ ಪ್ರದೇಶ ರಾಜ್ಯದ ಬರೇಲಿಯಲ್ಲಿ ನಡೆದ 2024-25ನೇ ಶಾಲಾ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಗಳಲ್ಲಿ ಕೊಪ್ಪಳ ಜಿಲ್ಲಾ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿದ್ದಾರೆ.

ಉತ್ತರ ಪ್ರದೇಶ ರಾಜ್ಯದ ಬರೇಲಿಯಲ್ಲಿ ನವೆಂಬರ್ 06 ರಿಂದ 10 ರವರಗೆ ನಡೆದ ಶಾಲಾ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಕೊಪ್ಪಳ ಜಿಲ್ಲಾ ಕ್ರೀಡಾ ವಸತಿ ನಿಲಯದಲ್ಲಿ ಕ್ರೀಡಾ ತರಬೇತಿ ಪಡೆಯುತ್ತಿರುವ ಮೋಹನ್, ಶಶಾಂಕ, ವಿಜಯ ಹಾಗೂ ಕಾಸಿಂ, ಈ ನಾಲ್ಕು ಕ್ರೀಡಾಪಟುಗಳು ಶಾಲಾ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ, ಉತ್ತಮ ಪ್ರದರ್ಶನ ನೀಡಿ, ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಕ್ರೀಡಾ ವಸತಿ ನಿಲಯದಿಂದ ಇನ್ನೂ ಹೆಚ್ಚಿನ ಕ್ರೀಡಾಪಟುಗಳು ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಹೊರಹೊಮ್ಮಲಿ ಎಂದು ಕ್ರೀಡಾಪಟುಗಳಿಗೆ ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳು, ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶುಭ ಹಾರೈಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಎಂದು ಕೊಪ್ಪಳದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ತಹಶೀಲ್ ಆವರಣದಲ್ಲಿ ಕೊಪ್ಪಳ ಜಿಲ್ಲಾ ಹಾಪ್ ಕಾಮ್ಸ್ ಉದ್ಘಾಟನೆ




**ಕೊಪ್ಪಳ :** ಇಲ್ಲಿನ ತಹಶೀಲ್ ಕಾರ್ಯಾಲಯದ ಆವರ್ಣದಲ್ಲಿ ಕಚೇರಿಗೆ ಬರುವ ಸಾರ್ವಜನಿಕರ ಅನುಕೂಲಕ್ಕಾಗಿ ತೋಟಗಾರಿಕೆ ಇಲಾಖೆ ಅಂಗಸಂಸ್ಥೆ, ಕೊಪ್ಪಳ ಜಿಲ್ಲಾ ಹಾಪ್ ಕಾಮ್ಸ್ ವಿನೂತನ ಅಂಗಡಿ ಶುಕ್ರವಾರ ಬೆಳಿಗ್ಗೆ ಉದ್ಘಾಟಿಸಲಾಯಿತು,

ಸದರಿ ಕೊಪ್ಪಳ ಜಿಲ್ಲಾ ಹಾಪ್ ಕಾಮ್ಸ್ ಅಂಗಡಿಯಲ್ಲಿ ಲಘು ಉಪಹಾರ ಟೀ ಹಾಲು ಇತರೆ ವ್ಯವಸ್ಥೆ ಗ್ರಾಹಕ ಸಾರ್ವಜನಿಕರಿಗೆ ನಿಗದಿತ ಶುಲ್ಕದಲ್ಲಿ ಲಭ್ಯವಾಗಿದೆ ಎಂದು ಇದರ ಪ್ರೋ, ಗಿಣಿಗೇರಿಯ ನಿವಾಸಿ ಶರಣಪ್ಪ ಅರ್ಹಾಳ ತಿಳಿಸಿದರು,

ಕೊಪ್ಪಳ ಜಿಲ್ಲಾ ಹಾಪ್ ಕಾಮ್ಸ್ ಉದ್ಘಾಟನೆ ಸಂದರ್ಭದಲ್ಲಿ ಶ್ರೀಮತಿ ಪರಿಮಳ ಅರ್ಹಾಳ, ವಿಶ್ವನಾಥ್ ಅರ್ಹಾಳ, ಮತ್ತು ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ, ಅನಿಲ್ ಕುಮಾರ್ ಬೆಗಾರ್ ಸೇರಿದಂತೆ ಕಾಶಪ್ಪ ಚಲವಾದಿ, ಅಲ್ಲದೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

## ನವಲಿ ಗ್ರಾಮದ ನೀರು ಪೂರೈಕೆ ಘಟಕಕ್ಕೆ ಸಿಇಓ ಭೇಟಿ



**ಬಾಗಲಕೋಟೆ :** ಜಲಧಾರೆ ಯೋಜನೆಯಡಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನಿರ್ಮಿಸಲಾಗುತ್ತಿರುವ ಹುನಗುಂದ ತಾಲೂಕಿನ ನವಲಿ ಗ್ರಾಮದ ಜಾಕ್‌ವೆಲ್, ಫೂಟ್ ಬ್ರಿಡ್ಜ ಹಾಗೂ ಪಂಪ್ ಹೌಸ್ ಕಾಮಗಾರಿ ಸ್ಥಳಕ್ಕೆ ಜಿ.ಪಂ ಸಿಇಓ ಶಶಿಧರ ಕುರೇರ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹುನಗುಂದ ತಾಲೂಕಾ ಪ್ರವಾಸದ ವೇಳೆ ಭೇಟಿ ನೀಡಿದ ಸಂದರ್ಭದಲ್ಲಿ ಧನ್ನೂರ ಹಾಗೂ ಇತರೆ 8 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನೀರು ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ಅಲ್ಲದೇ ಕೋಡಿಹಾಳ ಗ್ರಾಮದ ಜಲಧಾರೆ ಯೋಜನೆಯಡಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನಿರ್ಮಿಸಲಾಗುತ್ತಿರುವ ನೀರು ಸಂಸ್ಕರಣಾ ಘಟಕದ ಕಾಮಗಾರಿ ಪರಿವೀಕ್ಷಣೆ ಮಾಡಲಾಯಿತು.

# ಸರ್ಕಾರಿ ನೌಕರರ ಸಂಘದ 9 ಸ್ಥಾನಗಳಿಗೆ ಚುನಾವಣೆ

**ಚಿಕ್ಕೋಡಿ :** ಸರ್ಕಾರಿ ನೌಕರರ ಸಂಘದ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಘಟಕದ 49 ಸ್ಥಾನಗಳ ಅವಿರೋಧ ಆಯ್ಕೆ ನಂತರ ಬಾಕಿ ಉಳಿದಿದ್ದ ಒಂಭತ್ತು ಸ್ಥಾನಗಳಿಗೆ ನವೆಂಬರ 16 ರಂದು ಚುನಾವಣೆ ನಡೆಯಿತು. ಅಬಕಾರಿ ಇಲಾಖೆಯಿಂದ ಶಿವಕುಮಾರ್ ಅಮ್ಮಿನಭಾವಿ, ರಮೇಶ ಖೋತ, ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಮಹಾದೇವ ತಳವಾರ, ಸಾವ9ಜನಿಕ ಶಿಕ್ಷಣ ಇಲಾಖೆಯಿಂದ ದತ್ತಾ ಕಾಂಬಳೆ, ಸಿಡಿಪಿಓ ಇಲಾಖೆಯಿಂದ ಶ್ರೀಮತಿ ಗಂಗವ್ವ ಖೋತ, ಬಿ.ಸಿ.ಎಂ. ಇಲಾಖೆಯಿಂದ ನಾಗರಾಜ ಕರನಿಂಗ, ನೀರಾವರಿ ಇಲಾಖೆಯಿಂದ ಬಿ.ಎಸ್. ಹಂಜಿ, ಪ್ರೌಢ ಶಾಲಾ ಶಿಕ್ಷಕರ ವಿಭಾಗದಿಂದ ಸಂಜು ಹುಲ್ಲೊಳ್ಳಿ, ಆಲಗೌಡ ಸೋಲಾಪುರೆ ವಿಜಯಶಾಲಿಯಾಗಿದ್ದಾರೆ.

ಸಂಘದ 49 ಸ್ಥಾನಗಳಿಗೆ ವಿವಿಧ ಇಲಾಖೆಗಳ 83 ಸದಸ್ಯರು ನಾಮಪತ್ರ ಸಲ್ಲಿಸಿದ್ದರು. ಆ ಪೈಕಿ 26 ಸದಸ್ಯರು ನಾಮಪತ್ರ ವಾಪಸ್ ಪಡೆದಿದ್ದರಿಂದ 22 ಇಲಾಖೆಗಳ 40 ಸದಸ್ಯರ ಅವಿರೋಧ ಆಯ್ಕೆ ಆಗಿತ್ತು. ಉಳಿದ ಏಳು ಇಲಾಖೆಗಳ ಒಂಭತ್ತು ಸ್ಥಾನಗಳಿಗೆ 17 ಅಭ್ಯರ್ಥಿಗಳು ಸ್ಪರ್ಧಿಸಿದ್ದರು.

ಆರ್. ಡಿ. ಕಾಲೇಜಿನ ಆವರಣದಲ್ಲಿ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಿತು. ಸಂಜೆ ಮತ ಎಣಿಕೆ ಕಾರ್ಯ ನಡೆದು ಫಲಿತಾಂಶ ಪ್ರಕಟಿಸಲಾಯಿತು.

### ಸರಕಾರದ ನಡುವಳಿಕೆಗೆ ಅಧಿಕಾರಿಗಳು ಸುಸ್ತು, ಜನಪ್ರತಿನಿಧಿಗಳ ಆಕ್ರೋಶ | ಖಾಯಂಗೊಳಿಸಿ ವೇತನಕ್ಕೆ ಅನುದಾನ ನೀಡದ ಸರಕಾರ

# ಮೂರು ತಿಂಗಳ ವೇತನ ಬಾಕಿ: ಕೆಲಸ ಸ್ಥಗಿತಗೊಳಿಸಿ ಮುಷ್ಕರ ಕೈಗೊಂಡ ಪೌರ ಕಾರ್ಮಿಕರು

**ತೇರದಾಳ :** ಮೂರು ತಿಂಗಳಿಂದ ವೇತನ ಪಾವತಿಸಿಲ್ಲ ಎಂದು ಸ್ಥಳೀಯ ಪುರಸಭೆ ಪೌರ ಕಾರ್ಮಿಕರು ತಮ್ಮ ಕೆಲಸವನ್ನು ಸ್ಥಗಿತಗೊಳಿಸಿ ಶುಕ್ರವಾರದಿಂದ ಮುಷ್ಕರ ಕೈಗೊಂಡಿದ್ದಾರೆ. ಇದರಿಂದ ಸಂತೆ ದಿನವಾದ ಗುರುವಾದ ಕಸ ಪಟ್ಟಣದಲ್ಲಿ ಎಲ್ಲೆಡೆ ಬಿದ್ದಿದ್ದು, ಒಂದೇ ದಿನಕ್ಕೆ ದುರ್ವಾಸನೆ ಬಡಿಯುತ್ತಿದೆ.

ಕಳೆದ ಮೂರು ತಿಂಗಳಿಂದ ವೇತನ ಪಾವತಿಯಾಗಿಲ್ಲ. ಈಗ ನಾಲ್ಕನೇ ತಿಂಗಳು ಪ್ರಾರಂಭವಿದೆ. 9 ತಿಂಗಳಿಂದ ಸಂಕಷ್ಟ ಭತ್ಯೆಯೂ ನೀಡಿಲ್ಲ. ಇದರಿಂದ ನಾವು ಜೀವನ ನಡೆಸುವುದೆದು ಸವಾಲ್ ಆಗಿದೆ. ಮನೆ ಸಂತೆ, ಆರೋಗ್ಯ, ಮಕ್ಕಳ ಶಾಲೆಯ ಖರ್ಚು ಹೀಗೆ ಹಲವು ರೀತಿಯಲ್ಲಿ ತಾಪತ್ರೆ ಅನುಭವಿಸುತ್ತಿದ್ದೇವೆ. ಸಮಸ್ಯೆ ಕುರಿತು ಮುಖ್ಯಾಧಿಕಾರಿಗಳಿಗೆ ಮನವಿ ಪತ್ರ ಕೂಡ ನೀಡಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಾರ್ಮಿಕರ ಸಂಘದ ಅಧ್ಯಕ್ಷ ರಘು ಗೋಠಡಕಿ ತಿಳಿಸಿದರು.





ನೇರದಿಂದ ಖಾಯಂ-ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ನೇರ ಪಾವತಿ ವೇತನ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರ್ಮಿಕರನ್ನು 2019ರಲ್ಲಿ ಒಂದು ಹಂತದಲ್ಲಿ ಹಾಗೂ 2023 ಮಾರ್ಚ್ ನಲ್ಲಿ ಒಂದು ಹಂತದಲ್ಲಿ ಖಾಯಂಗೊಳಿಸುವ ನಿರ್ಧಾರ ಕೈಗೊಂಡು ಖಾಯಂಗೊಳಿಸುವ ಹೊಣೆಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಿತು. ಅದರಂತೆ ಆಯಾ ಜಿಲ್ಲಾಧಿಕಾರಿಗಳು ಖಾಯಂಗೊಳಿಸಿ ಆದೇಶ ಹೊರಡಿಸಿದ್ದಾರೆ.

ಏನೀದು ಸಮಸ್ಯೆ-2019ರಲ್ಲಿ ನೇರ ನೇಮಕಾತಿಯಿಂದ ಖಾಯಂಗೊಂಡ ಪೌರ ಕಾರ್ಮಿಕರಿಗೆ ಸರಕಾರ ವೇತನದ ಅನುದಾನ ನೀಡುತ್ತಿದೆ. ಅದರಂತೆ 2023 ಮಾರ್ಚ್ ತಿಂಗಳಲ್ಲಿ ಖಾಯಂಗೊಂಡ ಪೌರ ಕಾರ್ಮಿಕರ ಮೊದಲು ಏಳು ತಿಂಗಳ ವೇತನಕ್ಕೆ ಅನುದಾನ ಒದಗಿಸಿತು. ಆದರೆ 2024 ಫೆ ತಿಂಗಳಲ್ಲಿ ವೇತನ ಅನುದಾನದ ಕುರಿತು ಆದೇಶ ಮಾರ್ಪಾಡು ಮಾಡಿ ಅಭಿವೃದ್ಧಿಗಾಗಿ ಎಸ್‌ಎಫ್‌ಸಿ ಯೋಜನೆಯಡಿ ನೀಡುವ ಅನುದಾನದಲ್ಲಿಯೇ ಪೌರ ಕಾರ್ಮಿಕರ ವೇತನ ನೀಡಬೇಕು. ಕಡಿಮೆ ಬಿದ್ದಲ್ಲಿ ಸ್ಥಳೀಯ ಅಭಿವೃದ್ಧಿ ಅನುದಾನದಲ್ಲಿ ನೀಡಬೇಕೆಂದು ಆದೇಶ ಮಾಡಿದೆ. ಇದು ಸ್ಥಳೀಯ ಸಂಘ ಸಂಸ್ಥೆಗಳಿಗೆ ಬಿಸಿತುಪ್ಪವಾಗಿದೆ. ಕಾರಣ ಅಭಿವೃದ್ಧಿಗೆ ಅನುದಾನ ಸರಿಯಾದ ರೀತಿಯಲ್ಲಿ ನೀಡುವುದಿಲ್ಲ. ಇನ್ನೂ ಬಂದ ಅನುದಾನದಲ್ಲಿ ಎಲ್ಲ ಅನುದಾನವನ್ನು ಪೌರ ಕಾರ್ಮಿಕರ ವೇತನಕ್ಕೆ ಮೀಸಲು ಇಡಲು ಬರುವುದಿಲ್ಲ. 7.25, ವೈಯಕ್ತಿಕ ಕಾರ್ಯಕ್ರಮಗಳಿಗೆ ಶೇ. 5ರಷ್ಟು, ಟಿಎಸ್‌ಪಿ ಹೀಗೆ ಬೇರೆ ವಿಭಾಗಗಳಿಗೆ ಕಡ್ಡಾಯವಾಗಿ ಅನುದಾನ

**ಸರಕಾರ ನೇರ ಪಾವತಿ ವೇತನ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರನ್ನು ಖಾಯಂಗೊಳಿಸಿದ್ದು ಸಂತಸದ ಸಂಗತಿ. ಆದರೆ ಅವರಿಗೆ ವೇತನ ನೀಡಲು ಅನುದಾನ ನೀಡದಿದ್ದರೆ ಏನು ಪ್ರಯೋಜನ. ವರ್ಷಕ್ಕೆ ನೀಡುವ ಅಭಿವೃದ್ಧಿಗೆ ಅನುದಾನದಲ್ಲಿ ವೇತನ ನೀಡುವಂತೆ ಆದೇಶ ಹೊರಡಿಸಿದ್ದಾರೆ. ಆದರೆ ಸರಕಾರ ನೀಡುವ ಅನುದಾನದಲ್ಲಿ ಅಭಿವೃದ್ಧಿ ಬಿಡಿ, ವೇತನ ನೀಡಲು ಕೂಡ ಸಾಕಾಗುವುದಿಲ್ಲ. ಪುರಸಭೆ ಅಭಿವೃದ್ಧಿ ನಿಧಿಯಲ್ಲಿ ನೀಡಿದರು ಸಾಕಾಗುವುದಿಲ್ಲ. ವೇತನಕ್ಕಾಗಿ ಅನುದಾನ ನೀಡಲು ಸಾಧ್ಯ ಆಗದಿದ್ದರೆ ಕಾರ್ಮಿಕರನ್ನು ಖಾಯಂಗೊಳಿಸುವ ಉದ್ದೇಶ ಏನಿತ್ತು. ಇದು ತೇರದಾಳ ಪುರಸಭೆ ಸಮಸ್ಯೆ ಮಾತ್ರ ಅಲ್ಲ. ರಾಜ್ಯದ ಎಲ್ಲ ಸಂಘ ಸಂಸ್ಥೆಗಳ ಸಮಸ್ಯೆಯಾಗಿದೆ. ಆದ್ದರಿಂದ ಸರಕಾರ ಖಾಯಂಗೊಳಿಸಿರುವ ಪೌರ ಕಾರ್ಮಿಕರ ವೇತನಕ್ಕಾಗಿ ವಿಶೇಷ ಅನುದಾನ ನೀಡಬೇಕು.**

**| ಶಿಲ್ಪಾ ಗೌತಮ ರೋಡಕರ**
**ಪುರಸಭೆ ಅಧ್ಯಕ್ಷೆ**

ಮೀಸಲಿಡಲೇಬೇಕು. ಇದರಿಂದ ಸರಕಾರ ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಕೆಲಸ ಮಾಡಿದೆ. ಆದರೆ ವೇತನಕ್ಕಾಗಿ ಅನುದಾನ ನೀಡದೆ ಇರುವುದರಿಂದ ಪೌರ ಕಾರ್ಮಿಕರ ವೇತನ ಸಮಸ್ಯೆ ರಾಜ್ಯಾದ್ಯಂತ ಕಾಡುತ್ತಿದೆ.

ಕೇವಲ 49 ಲಕ್ಷ ಅನುದಾನ!-2024-25ನೇ ಸಾಲಿನ ಎಸ್‌ಎಫ್‌ಸಿ ಯೋಜನೆಯಡಿ ತೇರದಾಳ ಪುರಸಭೆಗೆ ಪೌರ ಕಾರ್ಮಿಕರ ವೇತನ, ಅಭಿವೃದ್ಧಿ ಸೇರಿದಂತೆ ಇತರೆ ವಿಭಾಗಗಳಿಗೆ ಕೇವಲ 49 ಲಕ್ಷದಷ್ಟು ಅನುದಾನ ಬಂದಿದೆ. ಈ ಪೈಕಿ 23.74 ಲಕ್ಷ ಪೌರ ಕಾರ್ಮಿಕರ ವೇತನಕ್ಕಾಗಿ ಹಾಗೂ ಪೌರ ಕಾರ್ಮಿಕರ ಸಂಕಷ್ಟ ಭತ್ಯೆಗಾಗಿ 8.4 ಲಕ್ಷ ಅನುದಾನ ಮೀಸಲಿಡಲಾಗಿದೆ. ಇನ್ನೂ ಅಭಿವೃದ್ಧಿ ಕಾರ್ಯಗಳಿಗೆ ಅಷ್ಟಕಷ್ಟೇ.

1.5 ಕೋಟಿ ಬೇಕು!-ತೇರದಾಳ ಪುರಸಭೆಯಲ್ಲಿ 33 ಪೌರ ಕಾರ್ಮಿಕರು ಖಾಯಂಗೊಂಡಿದ್ದಾರೆ. ಪ್ರತಿ ತಿಂಗಳು ಕಾರ್ಮಿಕರ ವೇತನಕ್ಕಾಗಿ ಇತರೆ ಭತ್ಯೆಗಳನ್ನು ಸೇರಿ ಸರಾಸರಿ 12ಲಕ್ಷಕ್ಕೂ ಅಧಿಕ ಹಣ ಬೇಕು. ವರ್ಷಕ್ಕೆ 1.5 ಕೋಟಿಯಷ್ಟು ಹಣ ಬೇಕು. ಆದರೆ ವರ್ಷದಿಂದ ವರ್ಷ ಸರಕಾರದಿಂದ ಬರುವ ಅನುದಾನ ಕಡಿತಗೊಳ್ಳುತ್ತಿದೆ. ಸ್ಥಳೀಯ ಆದಾಯ ನಿಧಿಯಲ್ಲಿ ನೂರಕ್ಕೆ ನೂರರಷ್ಟು ತೆರಿಗೆ ಸಂಗ್ರಹವಾದರು ಕೂಡ ಪೌರ ಕಾರ್ಮಿಕರ ವೇತನ ನೀಡಲು ಸಾಧ್ಯ ಆಗುವುದಿಲ್ಲ. ಹೀಗಾದರೆ ಅಭಿವೃದ್ಧಿ ಕಾರ್ಯಗಳನ್ನು ಏನು ಮಾಡುವುದು ಕಾರ್ಮಿಕರ ವೇತನ ಹೇಗೆ ನೀಡುವುದು ಎಂಬುದರಲ್ಲಿ ಅಧಿಕಾರಿಗಳು ಅಸಹಾಯಕರಾಗಿದ್ದಾರೆ.

## ಜಂಗಮ ಸಮಾಜದಿಂದ ನಿರುಪಾಧೀಶ್ವರಶ್ರೀಗಳಿಗೆ ಸನ್ಮಾನ

**ಜಮಖಂಡಿ :** ನಗರದ ಸಾಕ್ಷಾತ್ಕಾರ ಭವನದಲ್ಲಿ ತಾಲೂಕಾ ಜಂಗಮ ಸಮಾಜ ಮತ್ತು ತಾಲೂಕಾ ಜಂಗಮ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಜಂಗಮ ಮಕ್ಕಳ ಪ್ರತಿಭಾಪುರಸ್ಕಾರ ಸಮಾರಂಭದಲ್ಲಿ ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತ ತಾಲೂಕಿನ ಮರೆಗುದ್ದಿಯ ಅಡವಿಸಿದ್ದೇಶ್ವರ ಮಠದ ಡಾ.ನಿರುಪಾಧೀಶ್ವರ ಶ್ರೀಗಳನ್ನು ಸನ್ಮಾನಿಸಿ ಗೌರವಿಸಲಾಯಿತು.



ಇದೇ ಸಂದರ್ಭದಲ್ಲಿ ಶಾಸಕ ನಾಡೋಜ ಡಾ.ಜಗದೀಶ ಗುಡಗುಂಟಿ, ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯರು, ಹಿರೇಪಡಸಲಗಿ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರು, ಮುತ್ತಿನಕಂತಿ ಹಿರೇಮಠದ ಪಂಡಿತಾರಾಧ್ಯಶಿವಲಿಂಗಶಿವಾಚಾರ್ಯರು, ಕೊಣ್ಣೂರಿನ ಹೊರಗಿನಮಠದ ಡಾ.ವಿಶ್ವಪ್ರಭುದೇವರು, ಬೆಂಗಳೂರಿನ ಖ್ಯಾತ ಸಾಹಿತಿ, ಚಲನಚಿತ್ರ ಪುರಸ್ಕೃತ ಡಾ.ರಾಜಶೇಖರ ಮಠಪತಿ (ರಾಗಂ), ಹಿರಿಯವೈದ್ಯ ಡಾ.ಕೆ.ಐ.ಗುರುಮಠ, ಶಿವಪುತ್ರಯ್ಯ ಸಿದಗಿರಿಮಠ, ಆರ್.ಎಸ್.ಅಕ್ಕಿ, ಅಶೋಕ ಗಾವಿ, ಜಿ.ಕೆ.ಮಠದ, ಡಾ.ಮಲ್ಲು ಮಠ, ಬಸಲಿಂಗಯ್ಯ ಬೃಂಗಿಮಠ, ಶಂಕ್ರಯ್ಯ ಕರಡಿಮಠ, ಶಂಕ್ರಯ್ಯ ಕರಡಿಮಠ, ಕಾಡಯ್ಯ ಹಿರೇಮಠ, ಎಂ.ಕೆ.ಹಿಟ್ಟಿನಮಠ, ಬಸವರಾಜ ಕಡ್ಡಿ ಸಹಿತ ಹಲವರು ಇದ್ದರು.

## ದೇವದಾಸಿ ಪದ್ಧತಿ ಮನುಕುಲಕ್ಕೆ ಅವಮಾನ: ಶ್ವೇತಾ ಬಿಡಕರ

**ಜಮಖಂಡಿ :** ಸಾಮಾಜಿಕ ಪಿಡುಗುಗಳು ಹೋಗಬೇಕಾಗಿದೆ. ಸರಕಾರ ಜೊತೆಗೆ ಸಾರ್ವಜನಿಕರು ಕೈಜೋಡಿಸಬೇಕು. ಬೆಳಗಾವಿ, ಬಾಗಲಕೋಟ ಎಚ್.ಐ.ವಿ.ಪೀಡತರ ಸಂಖ್ಯೆ ಹೆಚ್ಚಾಗಿದೆ. ದೇವದಾಸಿ ಅನಿಷ್ಠಪದ್ಧತಿ ಸಂಪೂರ್ಣವಾಗಿ ನಿರ್ಮೂಲನೆ ಆಗಬೇಕಾಗಿದೆ ಎಂದು ಉಪವಿಭಾಗಾಧಿಕಾರಿ ಶ್ವೇತಾ ಬಿಡಕರ ಹೇಳಿದರು.



ನಗರದ ಬಸವೇಶ್ವರ ವೃತ್ತದಲ್ಲಿರುವ ಗ್ರ್ಯಾಂಡ-ಇನ್-ವಸತಿ ಸಭಾಭವನದಲ್ಲಿ ಚೈತನ್ಯ ಮಹಿಳಾ ಸಂಸ್ಥೆ ಮುಧೋಳ ಮತ್ತು ಗುಡ್ ಯೋಜನೆ ಹಮ್ಮಿಕೊಂಡಿದ್ದ ವಿಶ್ವ ಮಕ್ಕಳ ದಿನಾಚರಣೆ ನಿಮಿತ್ತ ಮಕ್ಕಳನ್ನು ರಕ್ಷಿಸಿ ಭವಿಷ್ಯಕ್ಕಾಗಿ ಪರಿಸರ ಉಳಿಸಿ, ಬೆಳಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಾಮಾಜಿಕ, ಆರ್ಥಿಕವಾಗಿ ಸದೃಢರಾಗಲು ದೇವದಾಸಿ ಮಹಿಳೆಯರು ಸರಕಾರದ ಎಲ್ಲ ರೀತಿಯ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ದೇವದಾಸಿ ಪದ್ಧತಿ ಮನುಕುಲಕ್ಕೆ ಅವಮಾನ ಸಂಗತಿಯಾಗಿದೆ. ದೇವದಾಸಿ ಮಕ್ಕಳು ಗಟ್ಟಿತನ ಬೆಳಸಿಕೊಳ್ಳುವ ಮೂಲಕ ಸಮಾಜದಲ್ಲಿ ಮಾದರಿಯಾಗಿ ಬದುಕಬೇಕು ಎಂದರು.

ಹಿರಿಯ ಪತ್ರಕರ್ತ ಮಲ್ಲೇಶ ಆಳಗಿ ಮಾತನಾಡಿ, ರಾಜ್ಯದಲ್ಲಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ ಆಗಬೇಕೆಂದು ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಬೇಡಿಕೆ ಇಡಲಾಗಿದ್ದು, ಅದರಂತೆ ಸರಕಾರ ಮರು ಸಮೀಕ್ಷೆಗೆ ಸಿದ್ಧತೆ ಮಾಡಿಕೊಂಸು ನಿರ್ದೇಶನ ನೀಡಿದೆ. ವಂಚಿತ ದೇವದಾಸಿ ಮಹಿಳೆಯರು ಮರು ಸಮೀಕ್ಷೆಯಲ್ಲಿ ತಮ್ಮ ಹೆಸರು ನೊಂದಾಯಿಸುವ ಮೂಲಕ ಅನಿಷ್ಠ ಪದ್ಧತಿಗೆ ಕೊನೆಗೊಳ್ಳಬೇಕು. ಮುಧೋಳದ ಚೈತನ್ಯ ಮಹಿಳೆ ಸಂಸ್ಥೆ ಕಳೆದ 10 ವರ್ಷದಿಂದ ನಿರಂತರವಾಗಿ 5 ಜಿಲ್ಲೆಗಳಲ್ಲಿ ದೇವದಾಸಿ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವ ಮೂಲಕ ಸದೃಢರನ್ನಾಗಿ ಮಾಡುವ ಕೆಲಸದಲ್ಲಿ ತೊಡಗಿಕೊಂಡಿದೆ ಎಂದರು.

ಮುಧೋಳದ ಚೈತನ್ಯ ಮಹಿಳಾ ಸಂಸ್ಥೆ ಅಧ್ಯಕ್ಷೆ ಮಧು ನಡುವಿನಮನಿ ಮಾತನಾಡಿದರು. ವೇದಿಕೆಯಲ್ಲಿ ಗುಡ್ ಯೋಜನೆ ಕಾರ್ಯದರ್ಶಿ ರೇಖಾ ಗಾಡಿವಡ್ಡರ, ಸಮಾಜ ಕಲ್ಯಾಣ ಇಲಾಖೆ ಅಧಿಕ್ಷಕ ಸಿದ್ದು ಕೊಲಕಂಬಿ, ಕಾಶೀನಾಥ ಹೊಸಮನಿ ಸಹಿತ ಹಲವರು ಇದ್ದರು.

ಸ್ವಪ್ನಾ ಗೊಂಗಗೋಳ ಪ್ರಾರ್ಥಿಸಿದರು. ಐಶ್ವರ್ಯ ತಳಕೇರಿ ಸ್ವಾಗತಿಸಿದರು. ವಿಜಯಲಕ್ಷ್ಮೀ ಕಡಕೋಳ ನಿರೂಪಿಸಿದರು. ಅನಸೂಯಾ ಹಾದಿಮನಿ ವಂದಿಸಿದರು. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ದೇವದಾಸಿ ಮಕ್ಕಳು ಪಾಲ್ಗೊಂಡಿದ್ದರು.

# ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

### ಒತ್ತಡ ನಿವಾರಣೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಶಿವಾಜಿ ಅನಂತ ನಲವಡೆ ಕರೆ

**ವಿಜಯಪುರ :** ಜನರ ರಕ್ಷಣೆ-ಶಾಂತಿ ಸುವ್ಯವಸ್ಥೆ ಕಾರ್ಯದಲ್ಲಿ ತೊಡಗಿರುವ ಪೊಲೀಸ್ ಅಧಿಕಾರಿ-ಸಿಬ್ಬಂದಿಗಳು ಸಹ ತಮ್ಮ ಒತ್ತಡದ ನಡುವೆಯೂ ಇಂತಹ ಕ್ರೀಯಾಶೀಲ-ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಒತ್ತಡ ನಿವಾರಣೆಗೆ ಮುಂದಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶಿವಾಜಿ ಅನಂತ ನಲವಡೆ ಅವರು ಸಲಹೆ ನೀಡಿದರು.



ಶನಿವಾರ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾದ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ-ಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಕ್ರೀಡೆಗಳಿಂದ ದೇಹ ಸದೃಢತೆಯೊಂದಿಗೆ ಮಾನಸಿಕ ಸದೃಢತೆ ಕಾಯ್ದುಕೊಳ್ಳಲು ಸಹಕಾರಿಯಾಗಿದೆ. ಆರೋಗ್ಯಯುತ ಹಾಗೂ ಕ್ರಿಯಾಶೀಲತೆಯಿಂದಿರಲು ನಿರಂತರವಾಗಿ ಕ್ರೀಡೆ ಸೇರಿದಂತೆ ಇತರೆ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಕ್ರೀಯಾಶೀಲ ಮನಸ್ಸನ್ನು ಹೊಂದಲು ಸಾಧ್ಯ. ಆರೋಗ್ಯಕರ ಮನಸ್ಸನ್ನು ಕಾಪಾಡಿಕೊಳ್ಳಲು ಕ್ರೀಡಾ ಚಟುವಟಿಕೆಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಶಾಂತಿ ಸುವ್ಯವಸ್ಥೆ ಕಾಪಾಡಲು ಹಗಲು-ರಾತ್ರಿಯೆನ್ನದೇ, ದಿನದ 24 ಗಂಟೆಗಳ ಕಾಲ ಜನರ ಭದ್ರತೆಗಾಗಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಇಲಾಖೆಯ ಕಾರ್ಯದೊಂದಿಗೆ, ತಮ್ಮ ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಹೆಚ್ಚೆಚ್ಚು ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು. ಇದರಿಂದ ಆತ್ಮ ವಿಶ್ವಾಸ,ಸಾಮಾಜಿಕ ಸಂವಹನ ಕೌಶಲ್ಯ, ಶಿಸ್ತು, ನಾಯಕತ್ವದ ಗುಣ ಬೆಳೆಯುತ್ತದೆ.ಸತತ ಪ್ರಯತ್ನ,ಆತ್ಮ ವಿಶ್ವಾಸದಿಂದ ವೃತ್ತಿಯಲ್ಲಿಯೂ ನೈಪುಣ್ಯತೆಯೊಂದಿಗೆ ಸಾಧನೆ ಸಾಧ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ನಮ್ಮ ಕೆಲಸ ಕಾರ್ಯಗಳಲ್ಲಿ ಈ ಗುಣಗಳನ್ನು ಬೆಳೆಸಿಕೊಳ್ಳಬೇಕು. ವೃತ್ತಿ ಜೀವನದ ಒತ್ತಡದ ಮಧ್ಯೆಯೂ ದೈಹಿಕ ಶ್ರಮ, ಕ್ರೀಡೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಇಲ್ಲಿ ಆಯೋಜಿಸಿರುವ ಕ್ರೀಡಾಕೂಟದಲ್ಲಿ ಎಲ್ಲರೂ ಕ್ರೀಡಾ ಮನೋಭಾವದಿಂದ ಭಾಗವಹಿಸಿ ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಯಶಸ್ವಿಯಾಗಿ ಕ್ರೀಡಾಕೂಟ ನಡೆಸುವಂತೆ ಕರೆ ನೀಡಿ-ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಸ್ವಾಗತಿಸಿ, ಈ ಕ್ರೀಡಾಕೂಟಗಳಲ್ಲಿ ಆಸಕ್ತಿಯಿಂದ ಭಾಗವಹಿಸಬೇಕು. ಸೋಲು-ಗೆಲುವನ್ನು ಲೆಕ್ಕಿಸದೇ ಸ್ಫೂರ್ತಿ, ಚೈತನ್ಯದಿಂದ ಮೂರು ದಿನಗಳ ಕಾಲ ನಡೆಯುವ ಈ ಕ್ರೀಡಾಕೂಟದಲ್ಲಿ ಭಾಗವಹಿಸಿ ಎಂದು ಹೇಳಿದರು.

ಇದಕ್ಕೂ ಮೊದಲು ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ವಿಜೇತರು ಕ್ರೀಡಾ ಜ್ಯೋತಿಯನ್ನು ನೀಡುವುದರ ಮೂಲಕ ಕ್ರೀಡಾಕೂಟ-ಕ್ಕೆ ವಿದ್ಯುಕ್ತ ಚಾಲನೆ ದೊರೆಯಿತು. ಕ್ರೀಡಾಪಟುಗಳಿಂದ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಅರವಿಂದ ಹಾಗರಗಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶಂಕರ ಮಾರಿಹಾಳ, ರಾಮನಗೌಡ ಹಟ್ಟಿ, ಸೈನಿಕ ಶಾಲೆಯ ಪ್ರಾಂಶುಪಾಲರಾದ ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಟ, ಎನ್.ಸಿ.ಸಿ. ಅಧಿಕಾರಿ ಗಿರೀಶ ಶಿಂಧೆ, ಕೇಂದ್ರ ಕಾರಾಗೃಹದ ಅಧೀಕ್ಷಕರಾದ ಬಿ.ಎಂ ಕೊಟ್ರೇಶ, ಪೊಲೀಸ್ ಇಲಾಖೆಯ ಅಧಿಕಾರಿಗಳು, ನಿವೃತ್ತ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

### ಉತ್ತರಾದಿ ಮಠಾಧೀಶ ಶ್ರೀ ಸತ್ಯಾತ್ಮತೀರ್ಥರ ಸುವರ್ಣ ಮಹೋತ್ಸವದ ಅಂಗವಾಗಿ ಇಳಕಲ್ ಬ್ರಾಹ್ಮಣ ಸಮಾಜದಿಂದ ಭಗವದ್ಗೀತಾ ಅಭಿಯಾನ ಮಹಾಮಂಗಲ



**ಇಲಕಲ್ :** "ಶ್ರದ್ಧೆಯು ಭಕ್ತಿಗೆ ಮೂಲಾಧಾರವಾಗಿದೆ, ಭಕ್ತಿಯಿಂದ ಭಗವಂತನಿಗೆ ನಮ್ಮ ಮನಸ್ಸನ್ನು ಸಮರ್ಪಣೆ ಮಾಡಿದಾಗ ಸಮಾನತೆಯ ಸಂಸ್ಕಾರವು ದೊರೆತು ಧಾರ್ಮಿಕ ಜಾಗೃತಿ ಉಂಟಾಗುತ್ತದೆ. ಸದಾಚಾರ ಹಾಗೂ ಸದ್ಧರ್ಮಗಳು ಉತ್ತಮ ಸಮಾಜದ ನಿರ್ಮಾಣಕ್ಕೆ ಬುನಾದಿಯಾಗಿವೆ" ಎಂದು ಪಂಡಿತ ಶ್ರೀನಿಧಿ ಆಚಾರ್ಯ ಬಲ್ಲರವಾಡ ಅವರು ಭಗವದ್ಗೀತೆಯ ಸಂದೇಶವನ್ನು ಹೇಳಿದರು. ಇಳಕಲ್ ಶ್ರೀ ವೆಂಕಟೇಶ ದೇವಸ್ಥಾನದಲ್ಲಿ ಆಯೋಜಿಸಲಾಗಿದ್ದ ಭಗವದ್ಗೀತಾ ಅಭಿಯಾನದ ಮಂಗಲ ಮಹೋತ್ಸವದಲ್ಲಿ ಅವರು ಪ್ರವಚನವನ್ನು ನೀಡುತ್ತಿದ್ದರು.

ಉತ್ತರಾದಿ ಮಠಾಧೀಶ ಶ್ರೀಸತ್ಯಾತ್ಮತೀರ್ಥ ಗುರುಗಳ ಸುವರ್ಣ ಮಹೋತ್ಸವದ ಅಂಗವಾಗಿ ಕಳೆದ ಹತ್ತು ತಿಂಗಳುಗಳಿಂದ ಶ್ರೀಮದ್ ಭಗವದ್ಗೀತಾ ಅಭಿಯಾನವನ್ನು ದೇಶಾದ್ಯಂತ 108 ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಇಳಕಲ್ ಬ್ರಾಹ್ಮಣ ಸಮಾಜದ ಶ್ರೀ ಲಕ್ಷ್ಮೀ ವೆಂಕಟೇಶ ಸೇವಾಸಂಸ್ಥೆಯು ಉತ್ತರಾದಿ ಮಠ ಜ್ಞಾನವಾಹಿನಿ ಹಾಗೂ ಬಾಗಲಕೋಟೆಯ ವಿಶ್ವಮಾಧ್ವ ಪರಿಷತ್ತುಗಳು ಸಂಯುಕ್ತವಾಗಿ ಈ ಅಭಿಯಾನದಲ್ಲಿ ಭಾಗಿಯಾಗಿವೆ. ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಪಾಂಡುರಂಗ ಕುಲಕರ್ಣಿ ಅವರು ಅಭಿಯಾನದ ನೇತೃತ್ವವನ್ನು ವಹಿಸಿದ್ದರು. ಹಿರಿಯರಾದ ಬಂಡು ಕಟ್ಟಿಯವರು ಕಾರ್ಯಕ್ರಮಗಳನ್ನು ಸಂಯೋಜಿಸಿದ್ದರು. ಅವರು ತಯಾರಿಸಿದ 'ಇಳಕಲ್ ಭಗವದ್ಗೀತಾ ಅಭಿಯಾನ ಕಿರಿಯರಿಕೆ' ಎಂಬ ಬುಲೆಟಿನ್ ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಶ್ರೀಹರಿ ಪೂಜಾರ ಹಾಗೂ ರಾಮಚಂದ್ರ ಹುನಕುಂಟಿ ಅವರು ಸುಶ್ರಾವ್ಯವಾಗಿ ವೇದಘೋಷ ಮಾಡಿದರು. ಟಿ. ಎಚ್. ಕುಲಕರ್ಣಿ ಹಾಗೂ ಶ್ರೀಮತಿ ಛಾಯಾ ಪುರಂದರೆಯವರು ಅಭಿಯಾನದ ಬಗ್ಗೆ ಅನಿಸಿಕೆಗಳನ್ನು ತಿಳಿಸಿ ಭಗವದ್ಗೀತೆಯು ಜನರನ್ನು ಉತ್ತಮ ಜೀವನಕ್ಕಾಗಿ ಪ್ರೇರೇಪಿಸಿದೆ ಎಂದು ಹೇಳಿದರು. ಬ್ರಾಹ್ಮಣ ಸಮಾಜದ ಪರವಾಗಿ ಪಂ. ಶ್ರೀನಿಧಿ ಆಚಾರ್ಯರನ್ನು ಸನ್ಮಾನಿಸಲಾಯಿತು. ಮಂಗಲ ಮಹೋತ್ಸವದ ತೀರ್ಥಪ್ರಸಾದ ವ್ಯವಸ್ಥೆಯನ್ನು ನೇತ್ರತಜ್ಞರಾದ ಡಾ. ಸುಶೀಲ ಕಾಖಂಡಕಿ ಪರಿವಾರವು ವ್ಯವಸ್ಥೆಗೊಳಿಸಿತ್ತು. ಸಮಾಜದ ಪರವಾಗಿ ಅವರ ಕುಟುಂಬಕ್ಕೆ ಕೃತಜ್ಞತೆಗಳನ್ನು ತಿಳಿಸಲಾಯಿತು.

ಭಗವದ್ಗೀತಾ ಗ್ರಂಥವನ್ನು ಪಲ್ಲಕ್ಕಿಯಲ್ಲಿಟ್ಟು ನಗರದ ಮುಖ್ಯ ರಸ್ತೆಗಳಲ್ಲಿ ಮಂಗಳವಾದ್ಯಗಳೊಂದಿಗೆ ಸಂಭ್ರಮದಿಂದ ಮೆರವಣಿಗೆ ಮಾಡಲಾಯಿತು. ಬ್ರಾಹ್ಮಣ ಯುವಕ ಸಂಘ ಹಾಗೂ ಶ್ರೀಲಕ್ಷ್ಮೀ ಮಹಿಳಾ ಮಂಡಳಿಗಳು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದವು. ಅಭಿಯಾನದ ಯಶಸ್ಸಿಗಾಗಿ ಸೇವೆ ಸಲ್ಲಿಸಿದ ಶ್ರೀಮತಿ ಸುದೀಪ್ತಾ ಕಾಖಂಡಕಿ, ವಿದ್ವತ್ ಕಾಖಂಡಕಿ, ರಮೇಶ ಕುಲಕರ್ಣಿ ದಂಪತಿಗಳು, ಬಂಡು ಕಟ್ಟಿ, ಪಾಂಡುರಂಗ ಕುಲಕರ್ಣಿ, ಗಿರಿಧರ ದೇಸಾಯಿ, ನಳಪಾಕಪ್ರವೀಣ ಕೃಷ್ಣ ದೇಸಾಯಿ ಮುಂತಾದವರನ್ನು ಸನ್ಮಾನಿಸಲಾಯಿತು.

ಹಿರಿಯರಾದ ಡಾ. ಆರ್.ಎಮ್.ಕುಲಕರ್ಣಿ, ಪ್ರೊ. ಎಸ್.ಕೆ.ಕುಲಕರ್ಣಿ, ಪ್ರೊ. ಕೆ.ವಿ.ಸಂಗಮ, ಪ್ರೊ. ರಮೇಶ ಕುಲಕರ್ಣಿ, ನಾರಾಯಣಾಚಾರ್ಯ ಪೂಜಾರ, ವಿಜಯ ಕಾರ್ಕಳ, ಭಾಸ್ಕರ ಪಾಟೀಲ, ವೆಂಕಣ್ಣ ಕುಲಕರ್ಣಿ, ಜಗದೀಶ ಮರೋಳ, ಸತ್ಯನಾರಾಯಣ ಕರವಾ ಮುಂತಾದವರು ಅಭಿಯಾನದಲ್ಲಿ ಉಪಸ್ಥಿತರಿದ್ದರು. ಚಿದಂಬರ ದೇಶಪಾಂಡೆ ಹಾಗೂ ಸುರೇಶ ಪೂಜಾರ ಅವರು ಭೋಜನಕಾಲ ಸೀತಾಕಾಂತ ಸ್ಮರಣೆಯನ್ನು ಮಾಡಿದರು. ಬ್ರಾಹ್ಮಣ ಸಮಾಜದ ಕೋಶಾಧ್ಯಕ್ಷರಾದ ಕಾಶಿನಾಥ ದೇಶಪಾಂಡೆ ಅವರು ವಂದನಾರ್ಪಣೆ ಸಲ್ಲಿಸಿದರು.

# ವಕ್ಫ್ ಕಾಯ್ದೆ ವಿರುದ್ಧ 1974ರಿಂದ ಇದುವರೆಗೆ ಬಿಜೆಪಿ ಯಾಕೆ ಹೋರಾಟ ಮಾಡಿಲ್ಲ.!!: ಸಚಿವ ಎಂ.ಬಿ.ಪಾಟೀಲ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ವಕ್ಫ್ ಕಾಯ್ದೆ ವಿರೋಧಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಿಜೆಪಿ ನಡೆಸುತ್ತಿರುವ ಪ್ರತಿಭಟನೆಗೆ ಟಾಂಗ್ ಕೊಟ್ಟ ಕೈಗಾರಿಕಾ ಸಚಿವ ಎಂಬಿ ಪಾಟೀಲ, ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಿದ್ದು ಏನು? 1974ರಿಂದ ಇಲ್ಲಿಯವರೆಗೆ ಏಕೆ ಹೋರಾಟ ಮಾಡಿಲ್ಲ ಎಂದು ಪ್ರಶ್ನಿಸಿದರು.



ಬಿಜೆಪಿ ಅಧಿಕಾರಾವಧಿಯಲ್ಲೂ ವಕ್ಫ್ ಪರ ನೋಟೀಸ್ ನೀಡಲಾಗಿದೆ. ಪಹಣಿಯಲ್ಲಿ ವಕ್ಫ್ ಎಂದು ನಮೂದು ಮಾಡಲಾಗಿದೆ. ಅವರ ಕಾಲದಲ್ಲಿ ಗೆಜೆಟ್ ಬಗ್ಗೆ ಹೋರಾಟ ಮಾಡಿಲ್ಲ? ಬಿಜೆಪಿಯ 2014ರ ಚುನಾವಣಾ ಪ್ರಣಾಳಿಕೆಯಲ್ಲಿ ವಕ್ಫ್ ಪರ ಭರವಸೆ ನೀಡಿದ್ದರು. ಸಚಿವೆ ಶೋಭಾ ಕರಂದ್ಲಾಜೆ ಸಂಸತ್ನಲ್ಲಿ ವಕ್ಫ ಪರವಾಗಿ ಪ್ರಶ್ನೆ ಕೇಳಿದ್ದರು.

ನಂತರ ವಕ್ಫ ವಿರುದ್ಧ ಹೋರಾಟ ಮಾಡಿದ್ದಾರೆ. ಈಗ ಬಿಜೆಪಿಯವರು ಹೋರಾಟ ಮಾಡುತ್ತಿದ್ದಾರೆ ಎಂದರು.

ಶುಕ್ರವಾರ (ನ.22) ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕ್ಫ್ ವಿಚಾರದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಧ್ಯೆ ಪೈಪೋಟಿ ನಡೆದಿದೆ. ವಕ್ಫ್ ಹೋರಾಟದ ಕ್ರೆಡಿಟ್ ಗಾಗಿ ಹೋರಾಟ ನಡೆದಿದೆ ಎಂದು ಸಚಿವ ಎಂಬಿ ಪಾಟೀಲ ಹೇಳಿದರು.

ಚುನಾವಣಾ ಫಲಿತಾಂಶ ಪ್ರಕಟ ವಿಚಾರವಾಗಿ ಮಾತನಾಡಿದ ಅವರು, ಉಪ ಚುನಾವಣೆ, ಮಹಾರಾಷ್ಟ್ರದ ಹಾಗೂ ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ಕಾಂಗ್ರೆಸ್ ಗೆಲುವು ಪಡೆಯಲಿದೆ ಎಂಬ ವಿಶ್ವಾಸವಿದೆ ಎಂದರು.

ಉದ್ಯಮಿ ಗೌತಮ್ ಅದಾನಿ ಮೇಲೆ ಅಮೆರಿಕಾ ಕೋರ್ಟ್ ನಿಂದ ವಾರೆಂಜ್ ಜಾರಿ ವಿಚಾರವಾಗಿ ಮಾತನಾಡಿ, ತಪ್ಪು ಮಾಡಿದವರ ಮೇಲೆ ಕ್ರಮವಾಗುತ್ತದೆ. ಯಾರಾದರೇನು ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಕ್ರಮ ಆಗುತ್ತದೆ. ಅದೊಂದು ಕಾನೂನು ಪ್ರಕ್ರಿಯೆ ಎಂದು ಎಂ.ಬಿ. ಪಾಟೀಲ ಹೇಳಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State